# Karnataka Map




ವಾಕರಸಾಸಂಸ್ಥೆ
ಈಕರಸಾಸಂಸ್ಥೆ
ಕರಾರಸಾಸಂಸ್ಥೆ
ಬೆಂಮನಸಾಸಂಸ್ಥೆ
BIDAR
GULBARGA
BIJAPUR
BAGALKOT
BELGAUM
RAICHUR
GADAG
DHARWAD
KOPPAL
BELLARY
UTTAR
KANNAD
HAVERI
DAVANGERE
CHITRADURGA
TUMKUR
SHIMOGA
UDUPI
CHIKMAGALUR
TUMKUR
KOLAR
BANGALORE
DAKSHIN
HASSAN
MANDYA
KODAGU
MYSORE
CHAMRAJNAGAR

# ಪ್ರಯಾಣಿಕರ ಸನ್ನದು–2010

**ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**


ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ–580 030

**ದೂರವಾಣಿ :** 0836-2337484 **ಫ್ಯಾಕ್ಸ್:** 0836-233210

e-mail: ctm@nwkrtc.in website: www.nwkrtc.in

ಆರ್ ಅಶೋಕ್
ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ

# ಸಂದೇಶ

ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಉಪಯುಕ್ತಕರವಾದಂತಹ ಸೌಕರ್ಯಗಳನ್ನು ಕಲ್ಪಿಸುವ ದಿಸೆಯಲ್ಲಿ ಗುರುತರವಾದ ಮತ್ತು ಜವಾಬ್ದಾರಿಯುತವಾದ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಸರ್ಕಾರದ ಪ್ರತಿಯೊಂದು ಅಂಗ ಸಂಸ್ಥೆಯಲ್ಲಿ ಒಂದು ಸನ್ನದನ್ನು ತಯಾರಿಸಿ ಸಾರ್ವಜನಿಕರು ಆಯಾ ಸಂಸ್ಥೆಗಳಿಂದ ಯಾವ ವಿಧದ ಸೇವಾ ಸೌಕರ್ಯಗಳನ್ನು ಪಡೆಯಬಹುದಾಗಿದೆ ಎಂಬುದನ್ನು ಗುರುತಿಸಿ ನಮೂದಿಸುವ ಪ್ರಸ್ತಾವನೆಯನ್ನು ನಾನು ಉತ್ತೇಜಿಸುತ್ತೇನೆ.

ಸಾರ್ವಜನಿಕರು ತಾವು ಸಂದಾಯ ಮಾಡುವ ಹಣಕ್ಕೆ ಯಾವ ಯಾವ ರೀತಿಯ ಸೇವಾ ಸೌಕರ್ಯಗಳನ್ನು ಪಡೆದುಕೊಳ್ಳುತ್ತಾರೆಂಬುದರ ಬಗ್ಗೆ ಅರಿತುಕೊಳ್ಳುವ ಹಕ್ಕು ಉಳ್ಳವರಾಗಿರುತ್ತಾರೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಒಂದು ಬೃಹತ್ ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಸಂಸ್ಥೆಯ ಆದ್ಯ ಕರ್ತವ್ಯವಾಗಿದೆ. ಸಂಸ್ಥೆಯು ಸಾರ್ವಜನಿಕ ನಿರೀಕ್ಷೆಗೆ ಹಾಗೂ ಬೇಡಿಕೆಗಳಿಗೆ ತಕ್ಕಂತೆ ಪರಿಣಾಮಕಾರಿಯಾಗಿ ಸ್ಪಂದಿಸುವುದಲ್ಲದೆ, ಪ್ರಯಾಣಿಕರೊಂದಿಗೆ ಚಾಲಕ–ನಿರ್ವಾಹಕರು ಹಾಗೂ ಸಂಸ್ಥೆಯ ಇತರೇ ಸಿಬ್ಬಂದಿಗಳು ಸೌಜನ್ಯತೆಯಿಂದ ವರ್ತಿಸುವುದು ಬಹಳ ಮುಖ್ಯವಾಗಿರುತ್ತದೆ.

ಸಾರ್ವಜನಿಕ ಪ್ರಯಾಣಿಕರಿಗೆ ಸಂಸ್ಥೆಯಿಂದ ಒದಗಿಸುವ ವಿವಿಧ ರೀತಿಯ ಸೇವೆಗಳು, ಸೌಕರ್ಯಗಳು ಹಾಗೂ ಪ್ರಯಾಣಿಕರ ಕುಂದು–ಕೊರತೆಗಳನ್ನು ನಿವಾರಿಸಲು ಹಾಕಿಕೊಂಡಿರುವಂತಹ ಯೋಜನೆ ಮತ್ತು ಪರಿಹಾರ ಕ್ರಮಗಳ ಮಾಹಿತಿಯನ್ನು ಒಳಗೊಂಡಿರುವ ನಾಗರಿಕರ ಸನ್ನದನ್ನು ಪ್ರಕಟಿಸುತ್ತಿರುವುದು ಬಹಳ ಸಂತೋಷದ ವಿಷಯ.

ವಾ.ಕ.ರ.ಸಾ.ಸಂಸ್ಥೆಯ "ಪ್ರಯಾಣಿಕರ ಸನ್ನದು" ಸಾರ್ವಜನಿಕ ಸೇವೆಗಳಿಗೆ ಮೀಸಲಿರುವಂತಹ ಇತರೇ ಸಾರ್ವಜನಿಕ ಸಂಸ್ಥೆಗಳಿಗೆ ಒಂದು ಮಾದರಿಯಾಗಲಿ ಎಂದು ಆಶಿಸುತ್ತೇನೆ.

(ಆರ್. ಅಶೋಕ)

ಮಲ್ಲಿಕಾರ್ಜುನ ವ್ಹಿ. ಸಾವಕಾರ
ಅಧ್ಯಕ್ಷರು, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

## <u>ಸಂದೇಶ</u>

ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಗ್ರಾಹಕರನ್ನು ಸಂತೃಪ್ತಗೊಳಿಸಲು ವ್ಯವಸ್ಥಿತವಾದ ಹಾಗೂ ಆರೋಗ್ಯದಾಯಕ ಪೈಪೋಟಿಯನ್ನು ಮಾಡುವುದು ತುಂಬಾ ಅವಶ್ಯಕವಾಗಿದೆ.

ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಕಲ್ಪಿಸುವ ಮಹತ್ತರ ಜವಾಬ್ದಾರಿಯನ್ನು ಹೊಂದಿರುತ್ತದೆ. ಪ್ರಯಾಣಿಕರು ನಿಗದಿತ ವೇಳೆಯ ಸಾರಿಗೆ ಕಾರ್ಯಾಚರಣೆ, ಸುರಕ್ಷಿತ ಮತ್ತು ಆರಾಮದಾಯಕ ಪ್ರಯಾಣ, ಶುಚಿಯಾದ ಮತ್ತು ಕಾರ್ಯಾಚರಣೆಗೆ ಯೋಗ್ಯವಾದ ಬಸ್ ಹಾಗೂ ಆರೋಗ್ಯದಾಯಕ ಪರಿಸರವುಳ್ಳ ಬಸ್ ನಿಲ್ದಾಣಗಳನ್ನು ಅಲ್ಲದೇ ಪ್ರಯಾಣಿಕರಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಬಯಸುತ್ತಾರೆ.

ಸಾರಿಗೆ ಸಂಸ್ಥೆಯು ತನ್ನ ಗ್ರಾಹಕರಿಗೆ ಒದಗಿಸುವ ಸೌಕರ್ಯಗಳ ವಿವರ ಮತ್ತು ಸೇವಾ ನ್ಯೂನತೆಗಳಾದಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ಸಂಸ್ಥೆಯ ಕಾನೂನು ಬದ್ಧ ಹಾಗೂ ನೈತಿಕ ಜವಾಬ್ದಾರಿಯಾಗಿದೆ. ಎಲ್ಲಾ ವಿಷಯ ಹಾಗೂ ಮಾಹಿತಿ ಒಳಗೊಂಡಿರುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ "ಪ್ರಯಾಣಿಕರ ಸನ್ನದು" ನ್ನು ತಯಾರಿಸುವುದು ಒಂದು ಸಂತೋಷದ ವಿಷಯವಾಗಿದೆ.

ವಾಕರಸಾಸಂಸ್ಥೆಯು ಪ್ರಯಾಣಿಕರ ಸನ್ನದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿರುವುದು ತುಂಬಾ ಶ್ಲಾಘನೀಯ. ಸಂಸ್ಥೆಯ ಗೌರವಯುತ ಪಾಲುದಾರರಾದ ಸಾರ್ವಜನಿಕ ಪ್ರಯಾಣಿಕರಿಗೆ ಪರಿಣಾಮಕಾರಿಯಾದ ಮತ್ತು ತೃಪ್ತಿಕರವಾದ ಸಾರಿಗೆ ಸೇವೆ ಸಲ್ಲಿಸುವಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

(ಮಲ್ಲಿಕಾರ್ಜುನ ವ್ಹಿ. ಸಾವಕಾರ)

ಎ.ಎನ್.ಪಾಟೀಲ, ಕೆ.ಎ.ಎಸ್.
ವ್ಯವಸ್ಥಾಪಕ ನಿರ್ದೇಶಕರು, ವಾಕರಸಾಸಂಸ್ಥೆ.

## ಮುನ್ನುಡಿ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಉತ್ತರ ಕರ್ನಾಟಕದ ಸಾರ್ವಜನಿಕರಿಗೆ ಉತ್ತಮ ಹಾಗೂ ದಕ್ಷ ಸೇವೆಯನ್ನು ಒದಗಿಸುತ್ತಿರುವ ಬೃಹತ್ ಸಾರಿಗೆ ಸಂಸ್ಥೆಯಾಗಿದೆ. ವಾಕರಸಾಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಬರುವ ಭಾಗವು ಸಂಪೂರ್ಣ ರಾಷ್ಟ್ರೀಕರಣವಾಗಿರುವುದರಿಂದ ಸಾರ್ವಜನಿಕರಿಗೆ ಉತ್ತಮ ಹಾಗೂ ವ್ಯವಸ್ಥಿತ ಸಾರಿಗೆ ಸೌಲಭ್ಯ ನೀಡುವ ಗುರುತರ ಜವಾಬ್ದಾರಿಯನ್ನು ಸಂಸ್ಥೆಯು ಹೊಂದಿರುತ್ತದೆ.

ನಾವು ಸಾರ್ವಜನಿಕ ಸೇವೆಗೆ ಕಟಿಬದ್ಧರಾಗಿ ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಸಂಸ್ಥೆಯಲ್ಲಿ ಸಾರ್ವಜನಿಕರಿಗೆ ಒದಗಿಸಿರುವ ಮೂಲ ಸೌಲಭ್ಯಗಳು ಸಾರ್ವಜನಿಕರ ಕಲ್ಯಾಣಕ್ಕಾಗಿಯೇ ಇರುವುದೆಂಬ ಭಾವನೆ ಮೂಡಬೇಕಾಗಿರುತ್ತದೆ.

ವಾಕರಸಾಸಂಸ್ಥೆಯು ಹೊರ ತರುತ್ತಿರುವ "ಪ್ರಯಾಣಿಕರ ಸನ್ನದು" ನಲ್ಲಿನ ಯೋಜನೆಗಳನ್ನು ಕಾರ್ಯರೂಪಗೊಳಿಸುವ ಭರವಸೆಯನ್ನು ಹೊಂದಿರುತ್ತದೆ. ಈ ಪ್ರಯಾಣಿಕರ ಸನ್ನದು ಸಾರ್ವಜನಿಕರಿಗೆ ನಮ್ಮ ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ಪರಿಚಯಿಸುವ ಜೊತೆಗೆ ಗುಣಮಟ್ಟವನ್ನು ಉತ್ತಮಪಡಿಸುವ ಮೂಲಕ ಸಿಬ್ಬಂದಿ ಮತ್ತು ಸಾರ್ವಜನಿಕರ ಬಾಂಧವ್ಯವನ್ನು ಉತ್ತಮಪಡಿಸುವ ಸೇತುವೆಯಾಗಿರುತ್ತದೆ.

ಸಂಘಟಿತ ಪ್ರಯತ್ನಗಳು ಹಾಗೂ ಅಭಿವೃದ್ಧಿಗಳು ನಮ್ಮ ಸಂಸ್ಥೆಯನ್ನು ದೇಶದಲ್ಲಿಯೇ ಅತ್ಯುತ್ತಮ ಸಾರ್ವಜನಿಕ ಸಾರಿಗೆ ಸಂಸ್ಥೆಯನ್ನಾಗಿ ಪರಿಗಣಿಸಲು ಎಡೆಮಾಡಿಕೊಡುತ್ತದೆ. ಸಂಸ್ಥೆಯ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಮರ್ಪಿತ ಸೇವೆಯಿಂದ ಈ ಪ್ರಯಾಣಿಕರ ಸನ್ನದನ್ನು ಯಶಸ್ವಿಗೊಳಿಸುತ್ತಾರೆ ಎಂಬ ಪೂರ್ಣ ಆತ್ಮವಿಶ್ವಾಸ ಹೊಂದಿರುತ್ತೇನೆ. ವಾಕರಸಾಸಂಸ್ಥೆಯು ಸಾರ್ವಜನಿಕರ ಹೃದಯದಲ್ಲಿ ಒಂದು ಉತ್ತಮ ಸ್ಥಾನವನ್ನು ಪಡೆಯುತ್ತದೆ ಎಂಬ ಮಹಾಭಿಲಾಶೆಯನ್ನು ಸಹ ಹೊಂದಿರುತ್ತೇನೆ.

(ಎ.ಎನ್.ಪಾಟೀಲ)

| ಅಧ್ಯಾಯಗಳು | ಪುಟ ಸಂಖ್ಯೆ |
|---|---|
| 1. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸೇವೆಗಳ ವಿವರ | 5 |
| 2. ಪ್ರಯಾಣಿಕರಿಗೆ ಒದಗಿಸುವ ವಿವಿಧ ಮಾದರಿಯ ಸೇವೆಗಳು | 6 |
| 3. ಸಾಮಾಜಿಕ ಹೊಣೆಗಾರಿಕೆಗಳು | 13 |
| 4. ಬಸ್ ನಿಲ್ದಾಣಗಳಲ್ಲಿ ದೊರಕುವ ಸೌಲಭ್ಯಗಳು | 14 |
| 5. ಸಂಸ್ಥೆಯ ಸಿಬ್ಬಂದಿಗಳ ಸೌಜನ್ಯಯುತ ವರ್ತನೆಯ ಭರವಸೆ | 15 |
| 6. ಸುಖಕರ ಪ್ರಯಾಣಕ್ಕಾಗಿ ಕ್ರಮಗಳು | 16 |
| 7. ಪರಿಸರ ಸ್ನೇಹಿ ಕಾರ್ಯಕ್ರಮಗಳು | 17 |
| 8. ಸೇವೆಯಲ್ಲಿ ನ್ಯೂನತೆಗಳಾದಾಗ ಪರಿಹಾರೋಪಾಯಗಳು | 18 |
| 9. ಉತ್ತಮ ಸೇವೆ ಒದಗಿಸಲು ನಮ್ಮೊಂದಿಗೆ ಸಹಕರಿಸಿ | 21 |


## ಅ ನು ಬಂ ಧ ಗ ಳು


| | |
|---|---|
| 1. ದೂರುಗಳು ಸಲಹೆಗಳು ಮತ್ತು ಪರಿಹಾರಗಳಿಗೆ ಅಧಿಕಾರಿಗಳು ಮತ್ತು ದೂರವಾಣಿ ಸಂಖ್ಯೆಗಳು | 23 |
| 2. ದೂರುಗಳು ಸಲಹೆಗಳು ಮತ್ತು ಪರಿಹಾರಗಳಿಗೆ ವಾಕರಸಾಸಂಸ್ಥೆಯ ಘಟಕಗಳು ಮತ್ತು ದೂರವಾಣಿ ಸಂಖ್ಯೆಗಳು | 24 |
| ಮುಂಗಡ ಆಸನ ಕಾಯ್ದಿರಿಸುವ ಏಜಂಟರುಗಳ ವಿವರಗಳು | 25 |
| 3. ಕೇಂದ್ರ ಬಸ್ ನಿಲ್ದಾಣ, ಹುಬ್ಬಳ್ಳಿಯಲ್ಲಿರುವ ಸೌಲಭ್ಯಗಳು | 27 |
| 4. ಇತರೆ ಬಸ್ ನಿಲ್ದಾಣಗಳಲ್ಲಿರುವ ಸೌಲಭ್ಯಗಳು | 28 |
| 5. ಸಾಂದರ್ಭಿಕ ಒಪ್ಪಂದದ ಸೇವೆಯ ದರಗಳು | 33 |
| 6. ಚಾರ್ಟಡ್ ಕಾಂಟ್ರಾಕ್ಟ್ ಸೇವೆಯ ದರಗಳು | 34 |
| 7. ಬಸ್ಸುಗಳ ಮೇಲೆ ಜಾಹೀರಾತಿನ ದರಗಳು | 35 |

## 1. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಂಕ್ಷಿಪ್ತ ನೋಟ :

ನಮ್ಮ ದೇಶದಲ್ಲಿ ಹಾಗೂ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಸಾರಿಗೆಯು ಒಂದು ಅತ್ಯಂತ ಜನ ಸಾಮಾನ್ಯ ಸಾರಿಗೆ ವ್ಯವಸ್ಥೆ ಅಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸಾರಿಗೆ ಸಂಸ್ಥೆಯ ಪಾತ್ರವು ರಾಜ್ಯದ ಆರ್ಥಿಕತೆಯ ಅಭಿವೃದ್ಧಿಯ ದಿಶೆಯಲ್ಲಿ ಬಹಳ ಮಹತ್ವವಾಗಿರುತ್ತದೆ. ಈ ಅವಶ್ಯಕತೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ರಸ್ತೆ ಸಾರಿಗೆ ಸಂಸ್ಥೆಗಳ ಕಾಯ್ದೆ 1950 ರ ಅನ್ವಯ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಕಡಿಮೆ ದರದ ಹಾಗೂ ವ್ಯವಸ್ಥಿತವಾದ ಸಾರಿಗೆ ಸೌಲಭ್ಯವನ್ನು ಒದಗಿಸುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸ್ಥಾಪಿಸಿತು.

ಸಂಸ್ಥೆಯ ಅರ್ಥಿಕ ಮಟ್ಟವನ್ನು ಉತ್ತಮಗೊಳಿಸಿ, ಉತ್ತಮ ಆಡಳಿತ ನಿಯಂತ್ರಣತೆಯನ್ನು ಸಾಧಿಸುವ ಉದ್ದೇಶದಿಂದ ಸಂಸ್ಥೆಯನ್ನು ವಿಕೇಂದ್ರೀಕರಣಗೊಳಿಸಿ 4 ಪ್ರತ್ಯೇಕ ಸಂಸ್ಥೆಗಳನ್ನಾಗಿ ಸ್ಥಾಪಿಸಲಾಯಿತು. ಅಂದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ. ಅದರಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ದಿನಾಂಕ 1–11–97 ರಿಂದ ಸ್ಥಾಪನೆಯಾಯಿತು. ಪ್ರಸ್ತುತ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ನಿತ್ಯ 4000 ಅನುಸೂಚಿಗಳನ್ನು 4380 ವಾಹನ ಬಲದೊಂದಿಗೆ ಕಾರ್ಯಾಚರಣೆ ಮಾಡುತ್ತಿದ್ದು, ಪ್ರತಿದಿನ ಸರಾಸರಿ 19.00 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುತ್ತಿದೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಮುಖ್ಯವಾಗಿ ಉತ್ತರ ಕನ್ನಡ, ಹಾವೇರಿ, ಗದಗ, ಬಾಗಲಕೋಟ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗಳನ್ನು ಪೂರೈಸುತ್ತಿದೆ.

## 2. ಪ್ರಯಾಣಿಕರಿಗೆ ನೀಡುವ ಸೇವೆಗಳು :

**2.1 ನಿಯಮಿತ ಸೇವೆಗಳು** : ಈ ಸೇವೆಗಳನ್ನು ದಿನನಿತ್ಯ ಪ್ರಯಾಣಿಕರ ಅನುಕೂಲಕ್ಕಾಗಿ ಒದಗಿಸಲಾಗುತ್ತಿದೆ.

ಅ) **ವೋಲ್ವೋ, ಸ್ಲೀಪರ್, ಮೇಘದೂತ ಸೇವೆಗಳು :** ತ್ವರಿತ ಆರಾಮದಾಯಕ ಹಾಗೂ ಹವಾನಿಯಂತ್ರಿತ ವೋಲ್ವೋ, ಸ್ಲೀಪರ್ ಹಾಗೂ ಮಯೂರ ಸಾರಿಗೆ ಸೇವೆಗಳನ್ನು ಪ್ರಯಾಣಿಕರಿಗೆ ಒಗದಿಸಲಾಗಿದೆ.

ಆ) **ರಾಜಹಂಸ, ಅಲ್ಟ್ರಾ ಡೀಲಕ್ಸ್, ಲಕ್ಸುರಿ ಸೇವೆಗಳು** : ಈ ಸೇವೆಗಳು ಹುಬ್ಬಳ್ಳಿಯಿಂದ ಹಾಗೂ ಇತರ ಜಿಲ್ಲಾ ಮುಖ್ಯ ಸ್ಥಳಗಳಿಂದ ಕರ್ನಾಟಕದ ರಾಜಧಾನಿ ಬೆಂಗಳೂರು ಹಾಗೂ ನೆರೆ ರಾಜ್ಯಗಳ ಮುಖ್ಯ ನಗರಗಳೊಂದಿಗೆ ಸಂಪರ್ಕವನ್ನು ಹೊಂದಿವೆ.

ಇ) **ವೇಗದೂತ ಸೇವೆಗಳು / ಬ್ರಾಂಡೆಡ್ ಸೇವೆಗಳು :** ಈ ಸೇವೆಗಳನ್ನು ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು ಹಾಗೂ ಅಂತರ ರಾಜ್ಯ ಕೇಂದ್ರಗಳ ನಡುವೆ ಕಾರ್ಯಾಚರಣೆ ಮಾಡಲಾಗುತ್ತಿದೆ.

**ಈ) ಗ್ರಾಮಾಂತರ/ಸಾಮಾನ್ಯ ಸೇವೆಗಳು :** ಈ ಸೇವೆಗಳನ್ನು ತಾಲ್ಲೂಕು, ಹೋಬಳಿ ಮತ್ತು ಗ್ರಾಮಗಳ ನಡುವೆ ಕಾರ್ಯಾಚರಣೆ ಮಾಡಲಾಗುತ್ತಿದೆ.

**ಉ) ನಗರ ಮತ್ತು ನಗರ ಹೊರವಲಯ ಸೇವೆಗಳು :** ಈ ಸೇವೆಗಳನ್ನು ಪ್ರಮುಖವಾಗಿ ದೊಡ್ಡನಗರಗಳು ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ ಹಾಗೂ ಕಾರವಾರ ನಗರಗಳಲ್ಲಿ ನಗರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

**ಊ) ನಿಲುಗಡೆ ರಹಿತ ಸೇವೆಗಳು :** ನಿಲುಗಡೆ ರಹಿತ ಸೇವೆಗಳನ್ನು ಹುಬ್ಬಳ್ಳಿ–ಬೆಳಗಾವಿ, ಹುಬ್ಬಳ್ಳಿ–ಗದಗ, ಬೆಳಗಾವಿ–ಗೋಕಾಕ, ಬೈಲಹೊಂಗಲ್–ಬೆಳಗಾವಿ, ಚಿಕ್ಕೋಡಿ–ಬೆಳಗಾವಿ ನಡುವೆ ಕಾರ್ಯಾಚರಣೆ ಮಾಡಲಾಗುತ್ತಿದೆ.

**ಋ)** ಗ್ರಾಮೀಣ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಪ್ರಸ್ತುತ ಅತೀ ಸಾಮಾನ್ಯ ಸಾರಿಗೆ ಸೇವೆಗಳಿಗೆ 6.5 ಕಿ.ಮೀ.ಗಳ ಒಂದು ಹಂತವನ್ನು ಪರಿಷ್ಕರಿಸಿ, 3 ಕಿ.ಮೀ.ಗಳಿಗೆ ಉಪಹಂತವನ್ನು ಗೊತ್ತುಪಡಿಸಿದೆ. ನಗರ ಹಾಗೂ ಗ್ರಾಮೀಣ ಸಾರಿಗೆ ಸೇವೆಗಳಲ್ಲಿ 4 ಕಿ.ಮೀ.ಗಳ 1 ಹಂತವನ್ನು ಪರಿಷ್ಕರಿಸಿ 2 ಕಿ.ಮೀ. ಗಳಿಗೆ ಪರಿಷ್ಕರಿಸಿ ಉಪಹಂತದ ಸೌಲಭ್ಯ ಒದಗಿಸಿದೆ.

**ಋ) ವಿಶೇಷ ಪ್ರೋತ್ಸಾಹಕರ ದರ ನಿಗದಿ :** ಆಯ್ದ ಕೆಲವು ಮಾರ್ಗಗಳಲ್ಲಿ ಹೆಚ್ಚಿನ ಪ್ರಯಾಣಿಕರನ್ನು ಆಕರ್ಷಿಸುವ ದೃಷ್ಟಿಯಿಂದ ವಿಶೇಷ ಪ್ರೋತ್ಸಾಹಕರ ದರಗಳನ್ನು ನಿಗದಿಪಡಿಸಿ, ಅಳವಡಿಸಲಾಗಿದೆ; ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗಿದೆ.

**ಏ) ಜಾತ್ರೆ / ಸಂತೆಯ ವಿಶೇಷ ಸಾರಿಗೆ :** ಸ್ಥಳೀಯ ಜಾತ್ರೆಗಳು ಹಾಗೂ ಸಂತೆಗಳ ದಿನಗಳಂದು ಹೆಚ್ಚಿನ ಸಾರಿಗೆ ಸೌಕರ್ಯ ಒದಗಿಸಲಾಗುತ್ತಿದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ನಿಗದಿತ ಸಮಯಕ್ಕೆ ಸರಿಯಾಗಿ ವಾಹನಗಳ ಕಾರ್ಯಾಚರಣೆ ಮಾಡಲು (ಆಗಮನ ಮತ್ತು ನಿರ್ಗಮನ) ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ ಹಾಗೂ ಈ ಕಾರ್ಯಾಚರಣೆಗಳು 30 ನಿಮಿಷಕ್ಕಿಂತ ಹೆಚ್ಚಾಗಿ ವಿಳಂಬವಾಗದಂತೆ ಕಾರ್ಯಾಚರಣೆ ಮಾಡುವುದು ಅದರ ಗುರಿಯಾಗಿರುತ್ತದೆ.

**2.2 ವಿಶೇಷ ಸೇವೆಗಳು** : ವಿಶೇಷ ಸಂದರ್ಭಗಳಾದ ಜಾತ್ರೆ, ಹಬ್ಬಗಳು, ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಹೆಚ್ಚುವರಿ ಸಾರಿಗೆ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಸ್ವಲ್ಪ ಹೆಚ್ಚಿನ ಪ್ರಯಾಣ ದರದೊಂದಿಗೆ ವಿಶೇಷ ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು.

**2.3 ಒಪ್ಪಂದದ ಸೇವೆಗಳು : (ಕಾಂಟ್ರಾಕ್ಟ್ ಸರ್ವಿಸಸ್)**

**ಅ)ಸಾಂದರ್ಭಿಕ ಒಪ್ಪಂದದ ಮೇಲಿನ ಸೇವೆಗಳು :** ಪ್ರವಾಸ, ಮದುವೆ, ವಿಹಾರ ಇತ್ಯಾದಿ ಸಂದರ್ಭಗಳಲ್ಲಿ ದಿನಗಳ ಆಧಾರದ ಮೇಲೆ ಮತ್ತು ಗಂಟೆಗಳ ಆಧಾರದ ಮೇಲೆ ರಾಜ್ಯದ ಒಳಗೆ ಮತ್ತು ನೆರೆ ರಾಜ್ಯಗಳ ಸ್ಥಳಗಳಿಗೆ ವಾಹನಗಳನ್ನು ನೀಡಲಾಗುತ್ತಿದೆ. ಒಂದು ದಿನ ಅಂದರೆ ಘಟಕದಿಂದ ವಾಹನವನ್ನು ಕೊಂಡೊಯ್ದ ಸಮಯದಿಂದ 24 ಘಂಟೆ ಅವಧಿಯೊಳಗೆ ಸದರಿ ವಾಹನವನ್ನು ಘಟಕಕ್ಕೆ ಹಿಂತಿರುಗಿಸಿದ ಸಮಯದವರೆಗೆ ಮತ್ತು 1 ದಿನಕ್ಕೆ ಕನಿಷ್ಠ 300 ಕಿ.ಮೀ. ಕ್ರಮಿಸುವುದಕ್ಕೆ ಒಳಪಟ್ಟಂತೆ ಇರುತ್ತದೆ. ರಾಜ್ಯ

ಸರ್ಕಾರದಿಂದ ಮಾನ್ಯತೆ ಪಡೆದ ಶಾಲಾ ಕಾಲೇಜುಗಳಿಗೆ ರಿಯಾಯಿತಿ ದರದಲ್ಲಿ ಬಸ್ಸುಗಳನ್ನು ಒದಗಿಸಲಾಗುತ್ತದೆ.

**ಆ)ಅಂತರ ರಾಜ್ಯ ಸಾಂದರ್ಭಿಕ ಒಪ್ಪಂದದ ಮೇಲಿನ ಸೇವೆಗಳು :** ಅಂತರ ರಾಜ್ಯ ಒಪ್ಪಂದದ ಸೇವೆಗಳನ್ನು ಕೂಡ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಒಪ್ಪಂದಕ್ಕಾಗಿ ವಿಧಿಸುವ ಪ್ರಯಾಣದರ ಹಾಗೂ ಷರತ್ತು ಮತ್ತು ನಿಬಂಧನೆಗಳು ದಿನಗಳ ಆಧಾರದ ಮೇಲೆ ನೀಡುವ ರೀತಿಯಲ್ಲೇ ಇರುತ್ತದೆ. ಆದರೆ, ಆಯಾ ರಾಜ್ಯಗಳು ವಿಧಿಸುವ ಪರವಾನಗಿ ಶುಲ್ಕ, ತೆರಿಗೆ ವೆಚ್ಚಗಳನ್ನು, ಒಪ್ಪಂದದ ಮೇಲೆ ವಾಹನ ಪಡೆಯುವವರೇ ಭರಿಸಬೇಕಾಗುತ್ತದೆ. ಈ ಮೊತ್ತವನ್ನು ಒಪ್ಪಂದದ ಮೇರೆಗೆ ವಾಹನವನ್ನು ಪಡೆಯುವ ಸಮಯದಲ್ಲಿ ಮುಂಗಡವಾಗಿ ಪಡೆಯಲಾಗುವುದು.

**ಇ)ಸಾಂದರ್ಭಿಕ ಒಪ್ಪಂದದ ಆಧಾರದ ಮೇಲೆ ಬಸ್ಸುಗಳನ್ನು ಪಡೆಯಲು ನಿಗದಿಪಡಿಸಿರುವ ಷರತ್ತು ನಿಬಂಧನೆಗಳು :** ಒಪ್ಪಂದದ ಆಧಾರದ ಮೇಲೆ ವಾಹನಗಳನ್ನು ನೀಡುವುದಕ್ಕೆ ತಗಲುವ ಮೊತ್ತದ ಜೊತೆಗೆ ಸುಮಾರು ಶೇಕಡ 20 ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಪಾವತಿ ಮಾಡಬೇಕಾಗುತ್ತದೆ. ಈ ಠೇವಣಿ ಹಣವನ್ನು ಸಾಮಾನ್ಯವಾಗಿ ಅಂತಿಮ ಲೆಕ್ಕಾಚಾರ ಮಾಡಿದ ಮೇಲೆ ಹಿಂತಿರುಗಲಾಗುವುದು. ಈ ರೀತಿಯ ಒಪ್ಪಂದದ ಮೇಲೆ ನೀಡುವ ವಾಹನಗಳಲ್ಲಿ ಕನಿಷ್ಠ 3 ರಿಂದ 12 ವರ್ಷದೊಳಗಿನ ಮಕ್ಕಳಿಗೆ ಅರ್ಧ ಟಿಕೆಟ್ ಲೆಕ್ಕದಲ್ಲಿ 2 ಮಕ್ಕಳನ್ನು ಒಬ್ಬ ವಯಸ್ಕರೆಂದು ಪರಿಗಣಿಸಲಾಗುವುದು. ಒಪ್ಪಂದದ ಆಧಾರದ ಮೇಲೆ ಪಡೆಯುವ ವೇಗಧೂತ ಬಸ್ಸುಗಳಲ್ಲಿ ಹೆಚ್ಚುವರಿ ಬಸ್ ದರ ನೀಡಿ ನಿಗದಿತ ಮಿತಿಗಿಂತ ಹತ್ತು ಜನ ಪ್ರಯಾಣಿಕರನ್ನು ಹೆಚ್ಚುವರಿಯಾಗಿ ರಾಜ್ಯದೊಳಗೆ ಕಾರ್ಯಾಚರಣೆಯಾಗುವ ಸಾಂದರ್ಭಿಕ ಬಸ್ಸುಗಳಲ್ಲಿ ಅವಕಾಶ ಮಾಡಿ ಕೊಡಲಾಗಿದೆ.

**ಈ)ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸುವ ಕುರಿತು :** ಸಂಸ್ಥೆಯ ಬಸ್ಸುಗಳ ಮೇಲೆ ಜಾಹೀರಾತು ನೀಡುವ ಕ್ರಮ ಜಾರಿಯಲ್ಲಿದ್ದು, ಆಸಕ್ತರು ಅನುಬಂಧ-**8** ರಲ್ಲಿ ತೋರಿಸಿದ ದರಗಳನ್ನು ನೀಡಿ ಜಾಹೀರಾತು ಪ್ರದರ್ಶಿಸಬಹುದಾಗಿದೆ.

**2.4 ಚಾರ್ಟರ್ಡ್ ಕಾಂಟ್ರಾಕ್ಟ್ ಸೇವೆಗಳ ವಿವರಗಳು :**

ಅ) ವಾ. ಕ. ರ. ಸಾ. ಸಂಸ್ಥೆಯು ಕೈಗಾರಿಕೆಗಳು/ ಸಂಸ್ಥೆಗಳು/ ಸಾರ್ವಜನಿಕ ಉದ್ದಿಮೆಗಳು/ಖಾಸಗಿ ಕಾರ್ಖಾನೆಗಳು/ಮನ್ನಣೆ ಪಡೆದ ಶಿಕ್ಷಣ ಸಂಸ್ಥೆ, ಇತ್ಯಾದಿ ಗಳಿಗೆ ಚಾರ್ಟರ್ಡ್ ಕಾಂಟ್ರಾಕ್ಟ್ ಆಧಾರದ ಮೇಲೆ ಬಸ್ಸುಗಳನ್ನು ಒದಗಿಸುತ್ತದೆ.

ಆ) ಈ ರೀತಿ ಚಾರ್ಟರ್ಡ್ ಕಾಂಟ್ರಾಕ್ಟ್ ಬಸ್ಸುಗಳನ್ನು ನೊಂದಾಯಿತ ಪೋಷಕರು ಮತ್ತು ಶಿಕ್ಷಣ ಸಂಘಗಳಿಗೆ ಅವರ ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕರೆದೊಯ್ಯಲು ರಿಯಾಯಿತಿ ದರದಲ್ಲಿ ಒದಗಿಸಲಾಗುವುದು. ಚಾರ್ಟರ್ಡ್ ಕಾಂಟ್ರಾಕ್ಟ್ ಬಸ್ಸುಗಳು ಬೇಕಾದಲ್ಲಿ ಮುಖ್ಯ ಸಂಚಾರ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ ಕೇಂದ್ರ ಕಛೇರಿ, ಹುಬ್ಬಳ್ಳಿ-580 030 ರವರನ್ನು ಅಥವಾ ಆಯಾ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳನ್ನು ಸಂಪರ್ಕಿಸಬೇಕಾಗಿರುತ್ತದೆ. ಘಟಕಗಳ ಮುಖ್ಯಸ್ಥರ ದೂರವಾಣಿ ಸಂಖ್ಯೆಗಳ ಪಟ್ಟಿಯನ್ನು **ಅನುಬಂಧ-1 ಮತ್ತು ಅನುಬಂಧ-2** ದಲ್ಲಿ ನೀಡಲಾಗಿದೆ.

**2.5. ಒಪ್ಪಂದದ ಮೇರೆಗೆ ಹಾಗೂ ಚಾರ್ಟಡ್ ಕಾಂಟ್ರಾಕ್ಟ್ ಮೇರೆಗೆ ಪಡೆಯುವ ಸೇವೆಗಳ ದರದ ವಿವರಗಳನ್ನು ಅನುಬಂಧ-6 ರಲ್ಲಿ ಮತ್ತು 7 ರಲ್ಲಿ ಕೊಡಲಾಗಿದೆ.**

**2.6 ರಿಯಾಯಿತಿ ಪ್ರಯಾಣದ ಸೇವೆಗಳು :**

ಅ) **ಮಾಸಿಕ ಸೀಸನ್ ಟಿಕೇಟುಗಳು :** ಪ್ರತಿ ದಿನ 23 ಹಂತ ಅಥವಾ 149.5 ಕಿ.ಮೀ. ವರೆಗೆ ಸಂಚರಿಸುವ ಪ್ರಯಾಣಿಕರಿಗೆ ಮಾಸಿಕ ಸೀಸನ್ ಟಿಕೇಟುಗಳನ್ನು ನೀಡಲಾಗುವುದು. ಈ ಪಾಸುಗಳಿಂದ ಪ್ರಯಾಣಿಸುವವರಿಗೆ ಹಣ ಉಳಿತಾಯವಾಗುವುದು.

ಆ) **ಸ್ವಾತಂತ್ರ್ಯ ಟಿಕೇಟುಗಳು :** ಕರ್ನಾಟಕ ರಾಜ್ಯದಲ್ಲಿ ಒಂದು ವಾರ ಕಾಲ ಮನಬಂದ ಕಡೆ ಪ್ರಯಾಣಿಸಲು ಈ ರಿಯಾಯಿತಿ ಟಿಕೇಟುಗಳನ್ನು ಉಪಯೋಗಿಸಬಹುದಾಗಿರುತ್ತದೆ. ಎಷ್ಟು ಸಾರಿ ಬೇಕಾದರೂ ಕಿಲೋಮಿಟರುಗಳ ನಿರ್ಬಂಧವಿಲ್ಲದೆ ಈ ಪಾಸುಗಳನ್ನು ಉಪಯೋಗಿಸಬಹುದಾಗಿರುತ್ತದೆ.

ಇ)**ಪಾಸುಗಳನ್ನು ವಿತರಿಸುವ ಕೌಂಟರುಗಳು :** ಪಾಸ್ ವಿತರಿಸುವ ಕೌಂಟರುಗಳು ಎಲ್ಲಾ ಬಸ್ ನಿಲ್ದಾಣಗಳಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತವೆ. ವಿದ್ಯಾರ್ಥಿಗಳ ರಿಯಾಯಿತಿ ಪಾಸು, ಮಾಸಿಕ ರಿಯಾಯಿತಿ ಟಿಕೇಟ್, ಸ್ವಾತಂತ್ರ್ಯ ಟಿಕೇಟ್ ಮುಂತಾದವುಗಳನ್ನು ಈ ಕೌಂಟರುಗಳ ಮೂಲಕ ನೀಡಲಾಗುವುದು.

## 2.7 ಕಾಯ್ದಿರಿಸುವ ಸೇವೆಗಳು :

ಅ)**ಮುಂಗಡ ಕಾಯ್ದಿರಿಸುವ ಸೌಲಭ್ಯ :** ಸಂಸ್ಥೆಯು ಅವತಾರ್ (ಎನಿ ವ್ಹೇರ್ ಎನಿ ಟೈಮ್ ಅಡ್ವಾನ್ಸ್ ರಿಝರ್ವೇಶನ್) ಅಂತರ್‌ಜಾಲ ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಕೌಂಟರ್‌ಗಳಲ್ಲಿ ಪ್ರಯಾಣಿಕರು ಆ ಬಸ್ ನಿಲ್ದಾಣಗಳಿಂದ ಹೊರಡುವ ಆಯ್ದ ಸೇವೆಗಳಿಗೆ 15 ದಿವಸಗಳ ಮುಂಚಿತವಾಗಿ ಸೀಟುಗಳನ್ನು ಕಾಯ್ದಿರಿಸಬಹುದಾಗಿರುತ್ತದೆ.

ಆ)**ಖಾಸಗಿ ಏಜೆಂಟರುಗಳ ಮೂಲಕ ಮುಂಗಡ ಟಿಕೇಟ್ ಕಾಯ್ದಿರಿಸುವುದು :** ವಾಕರಸಾಸಂಸ್ಥೆಯು ತನ್ನ ಕೌಂಟರಗಳಲ್ಲದೇ ಖಾಸಗಿ ಏಜೆಂಟರುಗಳಿಗೂ ಸಹ ಮುಂಗಡ ಟಿಕೇಟ್‌ಗಳನ್ನು ಕಾಯ್ದಿರಿಸಲು ಅನುಮತಿಯನ್ನು ನೀಡಿರುತ್ತದೆ. ಏಜೆಂಟರುಗಳ ಹೆಸರು, ದೂರವಾಣಿ ಸಂಖ್ಯೆಗಳನ್ನು ಅನುಬಂಧ-3 ರಲ್ಲಿ ತೋರಿಸಲಾಗಿದೆ.

ಇ)**ಮುಂಗಡ ಟಿಕೇಟ್ ಕಾಯ್ದಿರಿಸುವ ಪ್ರಯಾಣಿಕರಿಗೆ ಉಚಿತ ಪ್ರಯಾಣದ ಸೌಲಭ್ಯ :** ಮುಂಗಡ ಟಿಕೇಟ್‌ಗಳನ್ನು ಕಾಯ್ದಿರಿಸಿದ ಪ್ರಯಾಣಿಕರು ಅವರ ನಿವಾಸದ ಸ್ಥಳದಿಂದ ಬಸ್ ನಿಲ್ದಾಣಕ್ಕೆ ಅವರು ಕಾಯ್ದಿರಿಸಿದ ವಾಹನವು ಹೊರಡುವ ಎರಡು ಗಂಟೆ ಮುಂಚಿತವಾಗಿ ಉಚಿತವಾಗಿ ನಗರ ಸಾರಿಗೆಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ.

ಈ)**ಹೊರ ರಾಜ್ಯಗಳಲ್ಲಿ ಮುಂಗಡ ಟಿಕೇಟ್ ನೀಡಿಕೆ ಸೌಲಭ್ಯ :** ವಾ.ಕ.ರ.ಸಾ.ಸಂಸ್ಥೆಯಿಂದ ಪೂನಾ, ಮುಂಬೈ, ಕೊಲ್ಹಾಪೂರ, ಮಡಗಾಂವ ಮತ್ತು ವಾಸ್ಕೋ ನಗರದ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮುಂಗಡ ಟಿಕೇಟ್ ಕಾಯ್ದಿರಿಸುವ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಮಹಾರಷ್ಟ್ರ ರಾಜ್ಯದ ಮುಂಬೈ, ಪುಣೆ, ಕೊಲ್ಹಾಪೂರ ನಗರಗಳಲ್ಲಿ ಹಾಗೂ ಗೋವಾ ರಾಜ್ಯದ ಪಣಜಿಯಲ್ಲಿ ಈಗಾಗಲೇ ಈ ಸೌಲಭ್ಯ ಕಲ್ಪಿಸಲಾಗಿದೆ.

ಉ)**ಡೂಪ್ಲಿಕೇಟ್ ಮುಂಗಡ ಕಾಯ್ದಿರಿಸುವ ಟಿಕೇಟ್ ನೀಡುವ ಬಗ್ಗೆ :** ಪ್ರಯಾಣಕ್ಕೆ ಮೊದಲು ಪ್ರಯಾಣಿಕರು ತಮ್ಮ ಮುಂಗಡ ಕಾಯ್ದಿರಿಸುವ ಟಿಕೇಟ್‌ನ್ನು ಕಳೆದುಕೊಂಡಲ್ಲಿ ಆ ಪ್ರಯಾಣಕ್ಕೆ ತಗಲುವ ದರದ ಶೇಕಡ 25 ರಷ್ಟು ಹಣವನ್ನು ಹೆಚ್ಚುವರಿ ಪಾವತಿ ಮಾಡಿ ನಕಲು (ಡೂಪ್ಲಿಕೇಟ್) ಟಿಕೇಟ್‌ನ್ನು ಪಡೆಯಬಹುದಾಗಿರುತ್ತದೆ.

ಊ)**ಮಹಿಳೆಯರಿಗೆ ಹಾಗೂ ಅಂಗವಿಕಲರಿಗೆ ಆಸನಗಳನ್ನು ಮೀಸಲಿಡುವ ವ್ಯವಸ್ಥೆ :** ವಾ.ಕ.ರ.ಸಾ.ಸಂಸ್ಥೆಯ ವಾಹನಗಳಲ್ಲಿ ಮಹಿಳೆಯರಿಗೆ ಹಾಗೂ ಅಂಗವಿಕಲರಿಗೆ ಆಸನಗಳನ್ನು ಮೀಸಲಿಡುವ ವ್ಯವಸ್ಥೆ ಇರುತ್ತದೆ. ವೇಗದೂತ ಮತ್ತು ಸಾಮಾನ್ಯ ಬಸ್‌ಗಳಲ್ಲಿ ಹಿರಿಯ ನಾಗರಿಕರಿಗೆ-2, ಸ್ವಾತಂತ್ರ್ಯ ಹೋರಾಟಗಾರರಿಗೆ-2, ಅಂಧರಿಗೆ-2, ಮಹಿಳೆಯರಿಗೆ-9, ಹಾಗೂ ಅಂಗವಿಕಲರಿಗೆ-2, ಆಸನಗಳನ್ನು ಮೀಸಲಿಡಲಾಗಿದೆ. ನಗರ ಮತ್ತು ಹೊರವಲಯ ಬಸ್‌ಗಳಲ್ಲಿ 14 ಆಸನಗಳನ್ನು ಮಹಿಳೆಯರಿಗೆ ಹಾಗೂ 2 ಆಸನಗಳನ್ನು ಅಂಗವಿಕಲ ಪ್ರಯಾಣಿಕರಿಗೆ ಮೀಸಲಿಡಲಾಗಿದೆ.

## 2.8 ಮುಂಗಡ ಕಾಯ್ದಿರಿಸುವ ಸೌಲಭ್ಯಗಳು :

ಸಂಸ್ಥೆಯು ಅವತಾರ್ (Any Where Any Time Advance Reservation) ಅಂತರ್ಜಾಲ ಪದ್ಧತಿಯ ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯ ಅಡಿಯಲ್ಲಿ ಮುಂಗಡ ಬುಕ್ಕಿಂಗ್, ಟಿಕೆಟ್‌ನ ದಿನಾಂಕ ಹಿಂದೂಡುವುದು/ಮುಂದೂಡುವುದು, ರದ್ದತಿ, ಕರೆಂಟ್ ಬುಕ್ಕಿಂಗ್, ಒಪ್ಪಂದ ಆಧಾರದ ಮೇಲಿನ ಸೇವೆಗಳು, ಲಗೇಜ್, ಪ್ಯಾಕೇಜ್ ಟೂರ್ ಇತ್ಯಾದಿ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಈ ಹೊಸ ಪದ್ಧತಿಯನ್ನು ಆನ್ ಲೈನ್ ಬುಕ್ಕಿಂಗ್ ಹಾಗೂ ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಕರಾರಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ಮತ್ತು ಖಾಸಗಿ ಮುಂಗಡ ಕೌಂಟರ್‌ಗಳ ಮೂಲಕ ಪಡೆಯಬಹುದಾಗಿದೆ. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಂದು ಗುಂಪಿನಲ್ಲಿ ಮುಂಗಡವನ್ನು ಕಾಯ್ದಿರಿಸಿದಲ್ಲಿ ಟಿಕೆಟ್ ದರದ ಮೇಲೆ ಶೇ. 5 ರಷ್ಟು ರಿಯಾಯ್ತಿಯನ್ನು ನೀಡಲಾಗುತ್ತದೆ.

ವೇಗದೂತ ಮತ್ತು ಅದಕ್ಕೂ ಹೆಚ್ಚಿನ ಸೇವೆಯಲ್ಲಿ ಹೋಗಲು ಮತ್ತು ಬರಲು ಪ್ರಯಾಣಿಕರುಗಳಿಗೆ ಒಂದೇ ಕಾಲಕ್ಕೆ ಟಿಕೆಟ್‌ನ್ನು ಕಾಯ್ದಿರಿಸಿದಲ್ಲಿ, ಅಂತಹ ಪ್ರಯಾಣಿಕರಿಗೆ ಟಿಕೆಟ್‌ನ ಮೇಲೆ ಶೇ. 10 ರಷ್ಟು ರಿಯಾಯ್ತಿಯನ್ನು ಒದಗಿಸಲಾಗುತ್ತದೆ.

ಪ್ರಯಾಣಿಕರು ಇಂಟರ್‌ನೆಟ್ ಮೂಲಕ ಟಿಕೇಟ್‌ಗಳನ್ನು ಕಾಯ್ದಿರಿಸಬಹುದಾಗಿದೆ.

**ಮುಂಗಡ ಕಾಯ್ದಿರಿಸಿದ ಟಿಕಟ್ ರದ್ಧತಿ**

| | | |
|---|---|---|
| 1) | ಬಸ್ಸು ಹೊರಡುವ 72 ಗಂಟೆಗಳ ಮೊದಲು ರದ್ದುಪಡಿಸಿದ್ದಲ್ಲಿ | ಶೇ 10 ರಷ್ಟು ಪ್ರಯಾಣದ ಮೊತ್ತವನ್ನು ಕಡಿತಗೊಳಿಸಲಾಗುವುದು. (ಮುಂಗಡ ಕಾಯ್ದಿರಿಸುವಿಕೆಯ ಶುಲ್ಕ ಹೊರತುಪಡಿಸಿ) |
| 2) | ನಿಗದಿತ ಸಮಯಕ್ಕಿಂತ 72 ಗಂಟೆ ಒಳಗೆ ಹಾಗೂ ಬಸ್ಸು ಹೊರಡುವ 2 ಗಂಟೆ ಮೊದಲು | ಶೇ 25 ಕಡಿತಗೊಳಿಸಲಾಗುವುದು. (ಮುಂಗಡ ಕಾಯ್ದಿರಿಸುವಿಕೆಯ ಶುಲ್ಕ ಹೊರತುಪಡಿಸಿ) |
| 3) | ಅ) ಸೇವೆ ನೀಡಿದ ಸ್ಥಳದಲ್ಲಿ ನಿಗದಿತ ಸಮಯಕ್ಕಿಂತ 2 ಗಂಟೆ ಒಳಗೆ ಹಾಗೂ ಬಸ್ಸು ಹೊರಟ 1 ಗಂಟೆಯ ನಂತರ<br>ಆ) ಪ್ರಯಾಣ ಪ್ರಾರಂಭವಾಗುವ ಸ್ಥಳದಲ್ಲಿ ಮಾತ್ರ ಬಸ್ಸು ಹೊರಡುವ ನಿಗದಿತ ಸಮಯದ ವರೆಗೆ ಹಾಗೂ ಮಾರ್ಗದಲ್ಲಿ ಬರುವ ಸ್ಥಳದಲ್ಲಿ (ಟಿಕೆಟ್ ಮೇಲೆ ನಮೂದಿಸಿದ ಪ್ರಯಾಣದ ಪ್ರಾರಂಭ ಸ್ಥಳ) | ಶೇ 50 ರಷ್ಟು ಪ್ರಯಾಣ ದರವನ್ನು ಕಡಿತಗೊಳಿಸಲಾಗುವುದು. (ಮುಂಗಡ ಕಾಯ್ದಿರಿಸುವಿಕೆಯ ಶುಲ್ಕ ಹೊರತುಪಡಿಸಿ) |
| 4) | ಅ) ಸೇವೆ ನೀಡಿದ ಸ್ಥಳದಿಂದ ಬಸ್ಸು ಹೊರಟ 1 ಗಂಟೆಯ ನಂತರ<br>ಆ) ಬಸ್ಸು ಹೊರಟ ನಂತರ ಮಾರ್ಗದಲ್ಲಿ ಬರುವ ಸ್ಥಳದಲ್ಲಿ | ಯಾವುದೇ ಮರುಪಾವತಿ ಇಲ್ಲ |

## 3. ಸಾಮಾಜಿಕ ಹೊಣೆಗಾರಿಕೆಗಳು :

3.1 **ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸ್ :** ಶಾಲಾ ಕಾಲೇಜುಗಳು, ಸಂಜೆ ಕಾಲೇಜು, ಪಿ.ಹೆಚ್.ಡಿ., ಮತ್ತು ಐಟಿಐ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಸ್ಥೆಯು ಸಾಮಾನ್ಯ ಹಾಗೂ ವೇಗದೂತ ವಾಹನಗಳಲ್ಲಿ ಸುಮಾರು 50 ಕಿ.ಮೀ ದೂರದ ವರೆಗೆ ಪ್ರಯಾಣಿಸಲು ರಿಯಾಯಿತಿ ಪಾಸುಗಳನ್ನು ನೀಡುತ್ತಿದೆ. ಈ ಪಾಸುಗಳನ್ನು ಪಡೆಯಲು ಅನುಸರಿಸಬೇಕಾದ ಕ್ರಮ ಹಾಗೂ ಅವುಗಳ ದರ ಇತ್ಯಾದಿ ವಿವರಗಳನ್ನು ಬಸ್ ನಿಲ್ದಾಣಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರದರ್ಶಿಸಲಾಗಿದೆ. 1 ರಿಂದ 7ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಪಾಸುಗಳನ್ನು ವಿತರಿಸಲಾಗುತ್ತಿದೆ. ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಪ್ರೌಢಶಾಲಾ ಪಾಸ ದರದಲ್ಲಿ ಶೇ 25 ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ.

**3.2 ಅಂಧರಿಗೆ ಉಚಿತ ಪಾಸುಗಳು :** ಸಂಸ್ಥೆಯ ಸಾಮಾನ್ಯ/ವೇಗದೂತ ಬಸ್ಸುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಸಂಚರಿಸಲು ಉಚಿತ ಪಾಸುಗಳನ್ನು ದೃಢೀಕರಿಸಲ್ಪಟ್ಟ ಪೂರ್ಣ ಅಂಧರಿಗೆ ನೀಡಲಾಗುತ್ತಿದೆ.

3.3 **ಅಂಗವಿಕಲರಿಗೆ ರಿಯಾಯಿತಿ ಪಾಸ್ :** ಅಂಗವಿಕಲರಿಗೆ ಸಂಸ್ಥೆಯ ಸಾಮಾನ್ಯ/ ವೇಗದೂತ ಬಸ್ಸುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ವಾಸ ಸ್ಥಳದಿಂದ 100 ಕಿ.ಮೀ ಪರಿಮಿತಿಯೊಳಗೆ ಸಂಚರಿಸಲು ರಿಯಾಯಿತಿ ಬಸ್ ಪಾಸ್ ನೀಡಲಾಗುವುದು. ಈ ಸೌಲಭ್ಯ ಪಡೆಯುವ ಅಂಗವಿಕಲರು, ಅಂಗವಿಕಲ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ ಗುರುತಿಸಲ್ಪಟ್ಟಿರಬೇಕು.

3.4 **ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಪಾಸ್ :** ಸ್ವಾತಂತ್ರ್ಯ ಹೋರಾಟಗಾರರಿಗೆ ಸಂಸ್ಥೆಯ ಸಾಮಾನ್ಯ ಹಾಗೂ ವೇಗದೂತ/ರಾಜಹಂಸ ಬಸ್ಸುಗಳಲ್ಲಿ ರಾಜ್ಯದೊಳಗೆ/ಅಂತರರಾಜ್ಯದಲ್ಲಿ ಸಂಚರಿಸಲು ಉಚಿತ ಪಾಸುಗಳನ್ನು ನೀಡಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟಗಾರ ವ್ಯಕ್ತಿಯ ವಯಸ್ಸು 75 ವರ್ಷ ಮೀರಿದ್ದರೆ,ಅವರೊಂದಿಗೆ ಒಬ್ಬ ಸಹಾಯಕರು ಸಂಸ್ಥೆಯ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಮತಿಸಲಾಗುವುದು.

**3.5 ಹಿರಿಯ ನಾಗರಿಕರಿಗೆ ಶೇ.** 25 **ರಷ್ಟು ರಿಯಾಯಿತಿ :** 65 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ನಗರ ಸಾರಿಗೆ, ಉಪನಗರ ಸಾರಿಗೆ, ಸಾಮಾನ್ಯ, ವೇಗದೂತ ಹಾಗೂ ರಾಜಹಂಸ ಬಸ್ಸುಗಳಲ್ಲಿ ರಾಜ್ಯದೊಳಗೆ ಹಾಗೂ ಅಂತರ ರಾಜ್ಯದೊಳಗೆ ಸಂಚರಿಸಲು ಶೇ. 25 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

## 4. ಬಸ್ ನಿಲ್ದಾಣಗಳಲ್ಲಿ ದೊರಕುವ ಸೌಲಭ್ಯಗಳು :

4.1 ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣಗಳನ್ನು ನಿರ್ಮಿಸಿದೆ.

4.2 ಹುಬ್ಬಳ್ಳಿ ಕೇಂದ್ರ ಬಸ್ ನಿಲ್ದಾಣದಲ್ಲಿ ಒದಗಿಸಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ–4 ರಲ್ಲಿ ನೀಡಿದೆ.

4.3 ವಾ.ಕ.ರ.ಸಾ.ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಒದಗಿಸಿರುವ ಇತರೇ ಸೌಲಭ್ಯಗಳ ವಿವರಗಳನ್ನು ಅನುಬಂಧ–5 ರಲ್ಲಿ ಒದಗಿಸಲಾಗಿದೆ.

4.4 **ವೇಳಾ ಪಟ್ಟಿ ಪ್ರದರ್ಶನ :** ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣಗಳ ಸೂಚನಾ ಫಲಕಗಳಲ್ಲಿ ಬಸ್ ನಿಲ್ದಾಣಕ್ಕೆ ಬರುವ ಹಾಗೂ ಹೊರಡುವ ಬಸ್ಸುಗಳ ವೇಳಾ ಪಟ್ಟಿಯನ್ನು ಪ್ರದರ್ಶಿಸಲಾಗಿರುತ್ತದೆ. ಈ ಸೂಚನಾ ಫಲಕಗಳಲ್ಲಿ ಹೆಚ್ಚುವರಿ ಕಾರ್ಯಾಚರಣೆಗಳು, ಕಾರ್ಯಾಚರಣೆಗಳ ಪದ್ಧತಿ ಹಾಗೂ ಕಾರ್ಯಾಚರಣೆಗಳಲ್ಲಿ ಆಗುವ ವಿಳಂಬದ ಬಗ್ಗೆ ಮಾಹಿತಿಯನ್ನು ತಿಳಿಸಲಾಗುವುದು. ಬಸ್ ಕಾರ್ಯಾಚರಣೆಗಳಲ್ಲಿ ಆಗಿಂದಾಗ್ಗೆ ಆಗುವ ಬದಲಾವಣೆಗಳನ್ನು ವೇಳಾ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗುವುದು.

4.5 **ವಿಚಾರಣಾ ಕೌಂಟರುಗಳು :**

**ಅ)** ಪ್ರಯಾಣಿಕರಿಗೆ ಎಲ್ಲಾ ಮಾಹಿತಿಗಳನ್ನು ನೀಡಲು ಹಾಗೂ ಅವರ ವಿಚಾರಣೆಗಳಿಗೆ ಸೂಕ್ತ ಉತ್ತರವನ್ನು ನೀಡಲು ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಚಾರಣಾ ಕೌಂಟರುಗಳನ್ನು ಪ್ರಾರಂಭಿಸಲಾಗಿದೆ. ವಿಭಾಗಗಳ, ಘಟಕಗಳ ಹಾಗೂ ಬಸ್ ನಿಲ್ದಾಣಗಳ ದೂರವಾಣಿ ಸಂಖ್ಯೆಗಳನ್ನು ಒದಗಿಸಲಾಗಿದ್ದು, ಪ್ರಯಾಣಿಕರು ಅವಶ್ಯಕ ಮಾಹಿತಿಗಳನ್ನು ದೂರವಾಣಿ ಮೂಲಕ ಪಡೆಯಬಹುದಾಗಿರುತ್ತದೆ.

**ಆ)** ಕಛೇರಿ ಕೆಲಸದ ಸಮಯದಲ್ಲಿ ನಿಲ್ದಾಣ ಮೇಲ್ವಿಚಾರಕರು/ಅಧಿಕಾರಿಗಳು ಹಾಜರಿರುತ್ತಾರೆ, ಅವರ ಸೇವೆಯನ್ನು ಪ್ರಯಾಣಿಕರು ಪಡೆಯಬಹುದಾಗಿರುತ್ತದೆ. ಇತರೇ ಸಮಯಗಳಲ್ಲಿ ಕರ್ತವ್ಯದ ಮೇಲಿರುವ ಸಂಚಾರ ನಿಯಂತ್ರಕರ ಸೇವೆಯನ್ನು ಪಡೆಯಬಹುದಾಗಿರುತ್ತದೆ.

**ಇ)** ಎಲ್ಲಾ ವಿಭಾಗೀಯ ಕೇಂದ್ರ ಸ್ಥಾನಗಳ ಬಸ್ ನಿಲ್ದಾಣಗಳಲ್ಲಿ ವಾಹನಗಳ ಕಾರ್ಯಾಚರಣೆಗಳ ಬಗ್ಗೆ ಮಾಹಿತಿಗಳನ್ನು ನೀಡುವ ಸಲುವಾಗಿ ನಿಯಂತ್ರಣಾ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

**4.6ಸುಗಮ ಪ್ರವೇಶ, ಸುರಕ್ಷತೆ ಹಾಗೂ ಪ್ರಯಾಣಿಕರ ಅನುಕೂಲತೆಗಳು:** ವಾ.ಕ.ರ.ಸಾ.ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಸುಗಮವಾದ ವಿಶಾಲವಾದ ಪ್ರವೇಶ ದ್ವಾರಗಳನ್ನು ಒದಗಿಸಲಾಗಿದೆ. ಪ್ರಯಾಣಿಕರ ಹಿತದೃಷ್ಟಿ ಮತ್ತು ಸುರಕ್ಷತೆಗಾಗಿ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಪೋಲಿಸ್ ಔಟ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿರುತ್ತದೆ.

**5. ಸಂಸ್ಥೆಯ ಸಿಬ್ಬಂದಿಗಳ ಸೌಜನ್ಯ ವರ್ತನೆಯ ಭರವಸೆ :**

5.1 ಸಂಸ್ಥೆಯ ಸಿಬ್ಬಂದಿಗಳು ಪ್ರಯಾಣಿಕರೊಡನೆ ಸೌಜನ್ಯದಿಂದ ವರ್ತಿಸುವ ವಿಷಯದಲ್ಲಿ ಸಂಸ್ಥೆಯು ಎಲ್ಲಾ ಎಚ್ಚರಿಕೆಯನ್ನು ವಹಿಸಿರುತ್ತದೆ. ಪ್ರತಿಯೊಂದು ದೂರಿನ ಬಗ್ಗೆ ತ್ವರಿತವಾಗಿ ಸೂಕ್ತ ಕ್ರಮ ಕೈಗೊಳ್ಳುವ ಜೊತೆಗೆ ನೌಕರರಿಗೆ ಸಮಗ್ರವಾದ ಹಾಗೂ ನಿಯಮಿತವಾಗಿ ತರಬೇತಿಯನ್ನು ಸಂಸ್ಥೆಯು ನೀಡುತ್ತಿದೆ.

5.2 ಸಂಸ್ಥೆಯು ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಎಲ್ಲಾ ರೀತಿಯ ಕಾಳಜಿಯನ್ನು ವಹಿಸಿರುತ್ತದೆ. ಹಾಗೂ ಅಪಾಯ ಸಂಭವಿಸದ ಹಾಗೆ ಸುರಕ್ಷಾ ಚಾಲನೆಯ ಬಗ್ಗೆ ಈ ಕೆಳಕಂಡ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿರುತ್ತದೆ.

**ಅ)** ವೇಗ ನಿಯಂತ್ರಣ ಉಪಕರಣಗಳನ್ನು ಸಂಸ್ಥೆಯ ಎಲ್ಲಾ ವಾಹನಗಳಲ್ಲಿ ಅಳವಡಿಸಲಾಗಿದೆ.

ಆ) ಸುರಕ್ಷತಾ ಚಾಲನೆಗಾಗಿ ಚಾಲಕರಿಗೆ ಸಿಮ್ಯುಲೇಟರ್ ತರಬೇತಿಯನ್ನೊಳಗೊಂಡಂತೆ ಕಾಲ ಕಾಲಕ್ಕೆ ಪರಿಣಾಮಕಾರಿ ತರಬೇತಿಯನ್ನು ಕೊಡಲಾಗುತ್ತಿದೆ.

ಇ) ಚಾಲಕರು ಹಾಗೂ ಇತರೆ ಸಿಬ್ಬಂದಿಯವರು ಮದ್ಯಪಾನ ಮಾಡಿ ಕಾರ್ಯನಿರ್ವಹಿಸುವುದನ್ನು ತಡೆಗಟ್ಟುವ ಸಲುವಾಗಿ ಘಟಕಗಳಿಗೆ ಮತ್ತು ತನಿಖಾ ಸಿಬ್ಬಂದಿಗಳಿಗೆ ಒದಗಿಸಿರುವ ಬ್ರೆತ್ ಅನಲೈಸರ್ ಉಪಕರಣಗಳ ಮೂಲಕ ಪರಿಣಾಮಕಾರಿಯಾಗಿ ತಪಾಸಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಈ) ವಾಹನಗಳು ಕಾರ್ಯಾಚರಣೆಗಾಗಿ ಎಲ್ಲಾ ರೀತಿಯಲ್ಲೂ ಸುಸ್ಥಿತಿಯಾಗಿರುವುದಕ್ಕಾಗಿ ವಾಹನಗಳ ತಾಂತ್ರಿಕ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಕೈಗೊಳ್ಳಲಾಗುತ್ತಿದೆ.

**6. ಸುಖಕರ ಪ್ರಯಾಣಕ್ಕಾಗಿ ಕ್ರಮಗಳು :**

6.1 ವಾ.ಕ.ರ.ಸಾ.ಸಂಸ್ಥೆಯು ಪ್ರಯಾಣಿಕರ ಸುಖಕರ ಹಾಗೂ ಆರಾಮದಾಯಕ ಪ್ರಯಾಣಕ್ಕಾಗಿ ಕಾಲಕಾಲಕ್ಕೆ ಬದಲಾಗುತ್ತಿರುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಿದೆ.

6.2 .ಮಾರ್ಗಸೂಚಿ ಫಲಕಗಳೊಂದಿಗೆ ಸ್ವಚ್ಛವಾದ/ಉತ್ತಮವಾದ ವಾಹನಗಳನ್ನು ಆಚರಣೆ ಮಾಡುವುದಾಗಿ ಸಂಸ್ಥೆಯು ಭರವಸೆಯನ್ನು ಕೊಡುತ್ತದೆ.

| |
|---|
| "ಟಿಕೇಟುಗಳನ್ನು ಖರೀದಿಸಿ ನಿಮಗೆ ಉತ್ತಮ ಸೌಕರ್ಯಗಳನ್ನು ಒದಗಿಸಲು ಸಹಕರಿಸಿ" |

| |
|---|
| "ಆನ್–ಲೈನ್ ಮುಂಗಡ ಟಿಕೇಟ್ ಕಾಯ್ದಿರಿಸುವ ಸೌಲಭ್ಯ ಪಡೆಯಲು<br>ವೆಬ್ ಸೈಟ್: www.nwkrtc.in ಭೇಟಿ ಮಾಡಿ" |

| |
|---|
| "ಸುಖಕರ ಹಾಗೂ ಸುರಕ್ಷಿತ ಪ್ರವಾಸಕ್ಕಾಗಿ<br>ವಾ.ಕ.ರ.ಸಾ. ಸಂಸ್ಥೆಯ ಬಸ್ಸುಗಳನ್ನು ಒಪ್ಪಂದದ ಮೇಲೆ ಪಡೆಯಿರಿ" |

**7. ಪರಿಸರ ಸ್ನೇಹಿ ಕಾರ್ಯಕ್ರಮಗಳು.**

7.1 ವಾ.ಕ.ರ.ಸಾ.ಸಂಸ್ಥೆಯು ಪರಿಸರ ಶಾಖೆಯೊಂದನ್ನು ಕೇಂದ್ರ ಕಛೇರಿಯಲ್ಲಿ ಸ್ಥಾಪಿಸಿದ್ದು, ಈ ಶಾಖೆಯು ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಜಲ ಮಾಲಿನ್ಯಗಳು ಹಾಗೂ ಪರಿಸರದ ಮೇಲಿರುವ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಸೂಕ್ತ ಹಾಗೂ ವ್ಯವಸ್ಥಿತ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಪರಿಮಿತಿಯನ್ನು ದಾಟಿ ಹೊಗೆ ಉಗುಳುವ ಯಾವುದೇ ವಾಹನಗಳು ಸಂಸ್ಥೆಯಲ್ಲಿ ಇರುವುದಿಲ್ಲ. ದಟ್ಟವಾದ ಕಪ್ಪು ಹೊಗೆ ಉಗುಳುವ ಸಂಸ್ಥೆಯ ವಾಹನಗಳನ್ನು ಸಾರ್ವಜನಿಕರು ಗುರುತಿಸಿ ಮಾಹಿತಿ ನೀಡಿದ್ದಲ್ಲಿ ಅವರಿಗೆ ಸೂಕ್ತ ಬಹುಮಾನವನ್ನು ನೀಡಲಾಗುವುದು.

| |
|---|
| "ನಿಮ್ಮ ಊರಿಗೆ ನಮ್ಮ ಸಾರಿಗೆ" |

| |
|---|
| "ಮಹಿಳೆಯರಿಗೆ, ಅಂಗವಿಕಲರಿಗೆ ಹಾಗೂ ಹಿರಿಯ ನಾಗರಿಕರಿಗೆ<br>ಮೀಸಲಿರುವ ಆಸನಗಳನ್ನು ಬಿಟ್ಟುಕೊಡಿ". |

| |
|---|
| "ಸಲಹೆ ಮತ್ತು ದೂರುಗಳಿಗೆ ವೆಬ್ ಸೈಟ್: www.nwkrtc.in ಗೆ ಭೇಟಿ ಕೊಡಿ" |

## 8. ಸೇವೆಯಲ್ಲಿ ನ್ಯೂನತೆಗಳಾದಾಗ ಪರಿಹಾರೋಪಾಯಗಳು :

**8.1 ಕಳೆದುಕೊಂಡ ಟಿಕೇಟುಗಳು :** ಪ್ರಯಾಣಿಕರು ಖರೀದಿಸುವ ಟಿಕೇಟುಗಳು ಪ್ರಯಾಣಕ್ಕೆ ಸಂಬಂಧಿಸಿದಂತೆ ಮಾತ್ರ ಅಧಿಕೃತವಾಗಿರುತ್ತವೆ. ಸದರಿ ಟಿಕೇಟುಗಳನ್ನು ವರ್ಗಾಯಿಸತಕ್ಕದ್ದಲ್ಲ. ಟಿಕೇಟುಗಳು ಕಳೆದುಹೋದಲ್ಲಿ ಅದಕ್ಕೆ ಸಂಸ್ಥೆಯು ಜವಾಬ್ದಾರಿಯಾಗುವುದಿಲ್ಲ. ಕಳೆದು ಹೋದ ಮುಂಗಡ ಕಾಯ್ದಿಟ್ಟ ಟಿಕೇಟ್ ನಕಲು ಟಿಕೇಟ್‌ಗಳನ್ನು ಪ್ರಯಾಣ ದರದ ಶೇಕಡಾ 25 ರಷ್ಟು ಹೆಚ್ಚು ಶುಲ್ಕವನ್ನು ನೀಡಿ ಪಡೆಯಬಹುದಾಗಿರುತ್ತದೆ.

**8.2 ಸೇವೆಗಳ ರದ್ದತಿ :** ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ, ಸಂಸ್ಥೆಯು ಎಲ್ಲಾ ಅನುಸೂಚಿಗಳನ್ನು ತಪ್ಪದೇ ನಿಗದಿತ ಸಮಯಕ್ಕೆ ಕಾರ್ಯಾಚರಣೆ ಮಾಡಲು ಗುರಿಹೊಂದಿರುತ್ತದೆ. ಇನ್ನಿತರೆ ಯಾವುದೇ ಸಂದರ್ಭಗಳಲ್ಲಿ ಯಾವುದೇ ಸೇವೆಯು ರದ್ದಾಗದಂತೆ ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಯಾವುದೇ ಕಾರ್ಯಾಚರಣೆಯು ರದ್ದು ಆದಲ್ಲಿ ಆ ಬಗ್ಗೆ ಸಾರ್ವಜನಿಕರಿಗೆ ಆದಷ್ಟು ಬೇಗನೆ ತಿಳಿಸುವ ಜೊತೆಗೆ ಪರ್ಯಾಯ ವ್ಯವಸ್ಥೆಯಾಗಿ ವಾಹನಗಳಲ್ಲಿ ಸ್ಥಳಾವಕಾಶ ಮಾಡಿಕೊಡುವ ಇಲ್ಲವೇ ಅವರು ನೀಡಿರುವ ಪ್ರಯಾಣ ದರದ ಹಣವನ್ನು ನಿಯಮಾನುಸಾರ ಹಿಂದಕ್ಕೆ ನೀಡಲಾಗುವುದು.

**8.3 ಅಪಘಾತಗಳು ಮತ್ತು ಬ್ರೇಕ್–ಡೌನ್ ಮಾಹಿತಿ :**

ಅ) ಎಲ್ಲಾ ವಿಭಾಗೀಯ ಕೇಂದ್ರ ಸ್ಥಾನಗಳ ಬಸ್ ನಿಲ್ದಾಣಗಳಲ್ಲಿ ಸಂಚಾರ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದ್ದು, ಈ ಸ್ಥಳಗಳಲ್ಲಿ ಅಪಘಾತಗಳು, ವಾಹನ ಕಾರ್ಯಾಚರಣೆಯಲ್ಲಿ ವಿಳಂಬಗಳು, ಹೆಚ್ಚುವರಿ ಕಾರ್ಯಾಚರಣೆಗಳು ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸುವುದಲ್ಲದೇ, ಸಾರ್ವಜನಿಕರಿಗೆ ಮಾಹಿತಿಗಳನ್ನು ಒದಗಿಸಲಾಗುವುದು.

ಆ) ಅಪಘಾತ ಪ್ರಕರಣಗಳಲ್ಲಿ ಅಪಘಾತದ ಬಗ್ಗೆ ಸುದ್ದಿ ಬಂದ ತಕ್ಷಣ ಕಾರ್ಯನಿರತ ಸಂಚಾರ ನಿರೀಕ್ಷಕರು ಅಪಘಾತ ಸ್ಥಳಕ್ಕೆ ಭೇಟಿನೀಡಿ ಗಾಯಾಳುಗಳನ್ನು ಹತ್ತಿರದಲ್ಲಿರುವ ಆಸ್ಪತ್ರೆಗಳಿಗೆ ಸಾಗಿಸಲು ಕ್ರಮ ಕೈಗೊಳ್ಳುತ್ತಾರೆ. ಗಾಯಾಳುಗಳಿಗೆ ಗಾಯದ ಪ್ರಮಾಣದ ಅನುಸಾರ ರೂ. 5,000/- ಗಳವರೆಗೆ ಎಕ್ಸ್‌ಗ್ರೇಷಿಯಾ ರೂಪದಲ್ಲಿ ಆರ್ಥಿಕ ಪರಿಹಾರವನ್ನು ನೀಡಲಾಗುವುದು ಹಾಗೂ ದುರ್ಮರಣಹೊಂದಿದ ಪ್ರಯಾಣಿಕರ ಅವಲಂತರಿಗೆ ರೂ. 15,000/- ಕೂಡಲೇ ನೀಡಲಾಗುವುದು.

**8.4** **ಅಪಘಾತ ಪರಿಹಾರ ನಿಧಿ** ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷತೆ ಒದಗಿಸುವ ದೃಷ್ಟಿಯಿಂದ ದಿನಾಂಕಃ 31.5.2003 ಅಪಘಾತ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿದೆ.

ಅ) ಸಂಸ್ಥೆಯ ಸಾರಿಗೆ ಬಸ್ಸುಗಳ ಅಪಘಾತಗಳಲ್ಲಿ ಮರಣ ಹೊಂದಿದ ಪ್ರಯಾಣಿಕರ ಉತ್ತರ ಜೀವಿತರಿಗೆ ಅಪಘಾತ ಪರಿಹಾರ ನಿಧಿಯಿಂದ ರೂ. 2.50 ಲಕ್ಷ ಪರಿಹಾರವನ್ನು ತಕ್ಷಣ ನೀಡಲಾಗುತ್ತದೆ.

ಆ) ಸಂಸ್ಥೆಯ ಸಾರಿಗೆ ಬಸ್ಸುಗಳ ಅಪಘಾತಗಳಲ್ಲಿ ಮರಣ ಹೊಂದಿದ ಪ್ರಯಾಣಿಕೇತರರ ಉತ್ತರ ಜೀವಿತರಿಗೆ ಅಪಘಾತ ಪರಿಹಾರ ನಿಧಿಯಿಂದ ರೂ. 50 ಸಾವಿರ ಪರಿಹಾರವನ್ನು ತಕ್ಷಣ ನೀಡಲಾಗುತ್ತದೆ.

ಇ) ಶಾಶ್ವತವಾಗಿ ಅಂಗವಿಕಲತೆಗೊಂಡ ಪ್ರಯಾಣಿಕರು, ಹಾಗೂ ಮೃತಪಟ್ಟ ಪ್ರಯಾಣಿಕರ ಅವಲಬಿಂತರು ಯಾವುದೇ ನ್ಯಾಯಾಲಯವನ್ನು ಸಂಪರ್ಕಿಸದೇ ಕ್ರಮವಾಗಿ ರೂ. 25,000/– ಮತ್ತು ರೂ. 50,000/- ರಗಳ ಪರಿಹಾರ ಧನವನ್ನು ಪಡೆಯಬಹುದಾಗಿರುತ್ತದೆ. ಈ ವಿಷಯದಲ್ಲಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಈ) ಬ್ರೇಕ್–ಡೌನ್ ಪ್ರಕರಣಗಳಲ್ಲಿ ವರ್ತಮಾನ ಬಂದಕೂಡಲೇ 2 ಗಂಟೆಯೊಳಗಾಗಿ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆಯನ್ನು ಒದಗಿಸಲಾಗುವುದು.

## 8.5 ಸಲಹೆಗಳು ಮತ್ತು ದೂರುಗಳು.

ಅ) ವಾ.ಕ.ರ.ಸಾ.ಸಂಸ್ಥೆಯು ಪ್ರಯಾಣಿಕರಿಂದ ದೂರುಗಳನ್ನು ಸ್ವಾಗತಿಸುತ್ತದೆ. ಹಾಗೂ 15 ದಿನಗಳ ಒಳಗಾಗಿ ಅವರ ದೂರಗಳನ್ನು ಬಗೆಹರಿಸಲು ಧೃಡ ಸಂಕಲ್ಪ ಮಾಡಿರುತ್ತದೆ. ಎಲ್ಲಾ ಚಾಲಕರು/ನಿರ್ವಾಹಕರು/ಸಂಚಾರ ನಿಯಂತ್ರಕರು/ ಸಂಚಾರ ನಿರೀಕ್ಷಕರು/ಇತ್ಯಾದಿ ಸಿಬ್ಬಂದಿಗಳು ಕರ್ತವ್ಯದ ಮೇಲಿರುವಾಗ ಕಡ್ಡಾಯವಾಗಿ ಸಮವಸ್ತ್ರ ಹಾಗೂ ಹೆಸರಿನ ಬ್ಯಾಡ್ಜನ್ನು ಧರಿಸಿರುತ್ತಾರೆ ಹಾಗೂ ಗುರುತಿನ ಚೀಟಿಯನ್ನು ಹೊಂದಿರುತ್ತಾರೆ. ಅವರುಗಳಿಗೆ ಸಾರ್ವಜನಿಕರೊಂದಿಗೆ ಸೌಜನ್ಯತೆಯಿಂದ ವರ್ತಿಸಲು ತರಬೇತಿಯನ್ನು ನೀಡಲಾಗಿದೆ. ಅಪಘಾತಗಳ ಸಮಯದಲ್ಲಿ ಹಾಗೂ ಮಾರ್ಗಗಳ ಮಧ್ಯದಲ್ಲಿ ವಾಹನಗಳು ಕೆಟ್ಟು ನಿಂತಾಗ ಪರ್ಯಾಯ ವ್ಯವಸ್ಥೆಗಳನ್ನು ಮಾಡಿ ಸೂಕ್ತವಾಗಿ ನಿಭಾಯಿಸಲೂ ಸಹ ತರಬೇತಿ ನೀಡಲಾಗಿದೆ.

ಆ) ಕೇಂದ್ರ ಬಸ್ ನಿಲ್ದಾಣ ಹುಬ್ಬಳ್ಳಿ ಹಾಗೂ ವಿಭಾಗ ಮಟ್ಟದ ಪ್ರಮುಖ ನಿಲ್ದಾಣಗಳಲ್ಲಿ ದರ್ಜೆ 2 ಮತ್ತು ಇತರ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಬಸ್ ನಿಲ್ದಾಣಗಳಲ್ಲಿ ಇತರೇ ಸಿಬ್ಬಂದಿಗಳ ಸಹಕಾರ ದೊರಕದಿದ್ದಲ್ಲಿ ಇಂತಹ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಇ) ಬಸ್ ನಿಲ್ದಾಣದಲ್ಲಿ ಇಡಲಾಗಿರುವ ರಜಿಸ್ಟರ್‌ನಲ್ಲಿ ಯಾವುದೇ ಸಲಹೆ/ ದೂರುಗಳನ್ನು ದಾಖಲಿಸಬಹುದಾಗಿರುತ್ತದೆ. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಇಟ್ಟಿರುವ ಸಲಹೆ ಪೆಟ್ಟಿಗೆಗಳಲ್ಲಿ ಕೂಡ ಹಾಕಬಹುದು. ದೂರುಗಳನ್ನು ಬಸ್ ನಿಲ್ದಾಣಗಳ ಸಂಬಂಧಿಸಿದ ಮೇಲಾಧಿಕಾರಿಗಳು, ಘಟಕ ವ್ಯವಸ್ಥಾಪಕರು, ವಿಭಾಗೀಯ ನಿಯಂತ್ರಣಾಧಿಕಾರಿಗಳು ಹಾಗೂ ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಹುಬ್ಬಳ್ಳಿ ರವರಿಗೆ ಕಳುಹಿಸಬಹುದಾಗಿದೆ.

ಈ) ದೂರುಗಳು ವಿವಿಧ ರೀತಿಯದ್ದಾಗಿರುತ್ತವೆ. ಅಂದರೆ, ಟಿಕೇಟ್ ನೀಡದೇ ಇರುವುದು, ಬಳಸಿದ ಟಿಕೇಟ್‌ಗಳನ್ನು ನೀಡುವುದು, ಚಾಲಕರು–ನಿರ್ವಾಹಕರು ಹಾಗೂ ಇತರೇ ಸಿಬ್ಬಂದಿಗಳ ಅನುಚಿತ ವರ್ತನೆ, ವಂಚನೆ ಪ್ರಕರಣಗಳು, ಸಿಬ್ಬಂದಿಯಿಂದ ಧೂಮಪಾನ, ಅಧಿಕೃತ ವಾಹನ ನಿಲ್ದಾಣಗಳಲ್ಲಿ ಬಸ್‌ಗಳನ್ನು ನಿಲ್ಲಿಸದೇ ಇರುವುದು, ಹತೋಟಿ ಮೀರಿದ ಚಾಲನೆ, ಮಧ್ಯಪಾನ ಮಾಡಿ ಚಾಲನೆ ಮಾಡುವುದು, ವಾಹನಗಳ ಕಾರ್ಯಾಚರಣೆ ಆಗದೇ ಇರುವುದು, ಬಸ್ ನಿಲ್ದಾಣದ ಮೇಲ್ವಿಚಾರಕರನ್ನು ಸಂಪರ್ಕಿಸಿದಾಗ ಸರಿಯಾಗಿ ಪ್ರತಿಕ್ರಿಯಿಸದಿರುವುದು ಇತ್ಯಾದಿ.

ಉ) ಸಾಮಾನ್ಯವಾಗಿ ಎಲ್ಲಾ ದೂರು/ಸಲಹೆಗಳಿಗೆ 7 ದಿನಗೊಳಗಾಗಿ ಪ್ರತಿಕ್ರಿಯಿಸಲಾಗುವುದು ಹಾಗೂ 15 ದಿನಗಳ ಒಳಗೆ ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಉತ್ತರಿಸಲಾಗುವುದು. ಮುಂದುವರೆದಂತೆ ದೂರಿನ ಸ್ವರೂಪತೆಯನ್ನು ಅವಲಂಬಿಸಿ ತಪ್ಪಿತಸ್ಥ ಸಿಬ್ಬಂದಿಯವರ

ಮೇಲೆ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು. ಅವಶ್ಯಕತೆ ಕಂಡುಬಂದಲ್ಲಿ ದೂರು ನೀಡಿದವರನ್ನು ಸಹ ವಿಚಾರಣೆಗೆ ಕರೆಸಲಾಗುವುದು. ವಿಚಾರಣಾ ಅಧಿಕಾರಿಗಳ ವರದಿಯನ್ನು ಅನುಸರಿಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುವುದು.

ಊ) ದೂರುಗಳನ್ನು ಸಕಾಲದಲ್ಲಿ ಪರಿಶೀಲಿಸದೇ ಉತ್ತರ ನೀಡದಿದ್ದಲ್ಲಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳು ಅಥವಾ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಬಗ್ಗೆ ದೂರನ್ನು ಸಲ್ಲಿಸಬಹುದಾಗಿದೆ. ವಿಭಾಗೀಯ ನಿಯಂತ್ರಣಾಧಿಕಾರಿಗಳ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ವಿವರಗಳನ್ನು ಸಂಬಂಧಿಸಿದ ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.

**8.6 ಕಾಯ್ದಿರಿಸಿದ ಆಸನಗಳನ್ನು ಆಕ್ರಮಿಸಿಕೊಂಡಲ್ಲಿ ವಿಧಿಸುವ ದಂಡ :** ಸಂಸ್ಥೆಯ ಬಸ್ಸುಗಳಲ್ಲಿ ಮಹಿಳೆಯರಿಗೆ ಮತ್ತು ಅಂಗವಿಕಲರಿಗೆ ಮೀಸಲಾಗಿಟ್ಟಿರುವ ಆಸನಗಳನ್ನು ಉಪಯೋಗಿಸಬಾರದು. ಇದನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಪಟ್ಟ ಪ್ರಯಾಣಿಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ದಂಡ ವಿಧಿಸುವ ಅಧಿಕಾರವನ್ನು ಪ್ರಾದೇಶಿಕ ಸಾರಿಗೆ ಸಿಬ್ಬಂದಿ/ಪೋಲೀಸ್ ಸಿಬ್ಬಂದಿಯವರುಗಳಿಗೆ ನೀಡಲಾಗಿರುತ್ತದೆ.

## 9 ಉತ್ತಮ ಸೇವೆ ಒದಗಿಸಲು ನಮ್ಮೊಂದಿಗೆ ಸಹಕರಿಸಿ.

### 9.1 ಮಾಡಬೇಕಾದವುಗಳು :

ಅ) ವಾ.ಕ.ರ.ಸಾ.ಸಂಸ್ಥೆಯು ರಾಜ್ಯ ಸರ್ಕಾರದ ಒಂದು ಸಂಸ್ಥೆ. ವಾ.ಕ.ರ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಿ ಮತ್ತು ಪೋಷಿಸಿ ನಿಮಗೆ ಇನ್ನು ಉತ್ತಮ ಸೇವೆ ನೀಡಲು ಸಂಸ್ಥೆಗೆ ನೆರವಾಗಿ.

ಆ) ಟಿಕೇಟುಗಳನ್ನು ದಯಮಾಡಿ ಖರೀದಿಸಿ, ಖರೀದಿಸಿದ ಟಿಕೇಟುಗಳನ್ನು ಪ್ರಯಾಣದ ಕೊನೆವರೆಗೂ ಹಾಳು ಮಾಡದೇ ಅಥವಾ ಕಳೆದುಕೊಳ್ಳದೇ ಇಟ್ಟುಕೊಂಡು ಪ್ರಯಾಣ ಮುಗಿದ ನಂತರ ಹರಿದು ಹಾಕಿ. ಟಿಕೇಟು ರಹಿತ ಪ್ರಯಾಣಕ್ಕೆ ಪ್ರಯಾಣದ ದರದ ಹತ್ತು ಪಟ್ಟು ಇಲ್ಲವೆ ಐನೂರು ರೂಪಾಯಿಗಳ (ಇದರಲ್ಲಿ ಯಾವುದು ಕಡಿಮೆಯೋ ಅದನ್ನು) ದಂಡ ವಿಧಿಸಲಾಗುವುದು.

ಇ) ಸರಿಯಾದ ಚಿಲ್ಲರೆ ನೀಡಿ ಟಿಕೇಟು ಖರೀದಿಸಿ.

ಈ) ಬಸ್ ನಿಲ್ದಾಣಗಳಲ್ಲಿ ಕ್ಯೂ ಪದ್ಧತಿ ಅನುಸರಿಸಿ, ಇಳಿಯುವ ಪ್ರಯಾಣಿಕರಿಗೆ ಇಳಿಯಲು ಮೊದಲು ಅವಕಾಶ ಮಾಡಿಕೊಡಿ.

ಉ) ಮಹಿಳೆಯರು ಮತ್ತು ಅಂಗವಿಕಲರಿಗಾಗಿಯೇ ಕಾಯ್ದಿರಿಸಿದ ಆಸನಗಳನ್ನು ಅವರಿಗೆ – ಬಿಟ್ಟುಕೊಡಿ.

ಊ) ವಾ.ಕ.ರ.ಸಾ.ಸಂಸ್ಥೆ ಬಸ್ಸುಗಳು ಸಾರ್ವಜನಿಕರ ಆಸ್ತಿ, ಅವುಗಳನ್ನು ದಯಮಾಡಿ ರಕ್ಷಿಸಿ, ಹಾಳುಮಾಡಲು ಅವಕಾಶ ನೀಡಬೇಡಿ.

ಋ) ಬಸ್ ಮತ್ತು ಬಸ್ ನಿಲ್ದಾಣಗಳನ್ನು ಸ್ವಚ್ಛ ಹಾಗೂ ನಿರ್ಮಲವಾಗಿಡಲು ಸಹಕರಿಸಿ.

ಋ) ಕಡಿಮೆ ಲಗ್ಗೇಜು ನಿಮ್ಮ ಪ್ರಯಾಣದ ಆರಾಮವನ್ನು ಹೆಚ್ಚಿಸುತ್ತದೆ.30 ಕೆ. ಜಿ. ಗಳಷ್ಟು ಲಗ್ಗೇಜನ್ನು ಉಚಿತವಾಗಿ ಸಾರ್ವಜನಿಕ ಪ್ರಯಾಣಿಕರ ಕೊಂಡೊಯ್ಯಬಹುದಾಗಿರುತ್ತದೆ. ನಿರ್ವಾಹಕರು ಲಗ್ಗೇಜ್ ಚಾರ್ಟನ್ನು ಹೊಂದಿರುತ್ತಾರೆ.

ಎ) ವಾ.ಕ.ರ.ಸಾ.ಸಂಸ್ಥೆ ಚಾಲಕ / ನಿರ್ವಾಹಕರನ್ನು ಊಟ / ಉಪಹಾರಗಳಿಗೆ ಆದಷ್ಟುಮಟ್ಟಿಗೆ ಸಂಸ್ಥೆಯ ಬಸ್ಸು ನಿಲ್ದಾಣಗಳಲ್ಲಿ ಹಾಗೂ ಪರವಾನಿಗೆ ಪಡೆದ ಮಾರ್ಗ ಮಧ್ಯದ ಹೋಟೆಲುಗಳು/ಡಾಬಾಗಳಲ್ಲಿ ನಿಲ್ಲಿಸಲು ಒತ್ತಾಯಿಸಿ. ಚಾಲಕ/ನಿರ್ವಾಹಕರು ಅಧಿಕೃತವಾಗಿ ನಿಲ್ಲಿಸುವ ಉಪಹಾರ ಗೃಹಗಳ ಮತ್ತು ಡಾಬಾಗಳ ಪಟ್ಟಿಯನ್ನು ಹೊಂದಿರುತ್ತಾರೆ.

ಏ) ನಿಮ್ಮ ಲಗ್ಗೇಜುಗಳಿಗೆ ಟಿಕೇಟುಗಳನ್ನು ಪಡೆದು ದಂಡ ವಿಧಿಸುವುದರಿಂದ ತಪ್ಪಿಸಿಕೊಳ್ಳಿ.

ಐ) ನಿಮ್ಮ ಅನುಕೂಲಕ್ಕೆ ತಕ್ಕಂತೆ ಸೀಸನ್ ಟಿಕೇಟುಗಳನ್ನು ಪಡೆದು ಹಣ ಉಳಿತಾಯ ಮಾಡಿ.

ಒ) ನಿಮ್ಮ ಸುರಕ್ಷಿತ ಪ್ರಯಾಣಕ್ಕಾಗಿ ಮೋಟಾರು ವಾಹನಗಳ ಕಾಯ್ದೆ ಹಾಗೂ ನಿಯಮಾವಳಿಗಳ ಅಡಿಯಲ್ಲಿ ಬರುವ ನಿಯಮಗಳನ್ನು ಪಾಲಿಸಿ.

**9.2 ಮಾಡಬಾರದವುಗಳು :**

ಅ) ಅಧಿಕೃತ ಟಿಕೇಟು ಖರೀದಿಸದೆ ಪ್ರಯಾಣಿಸುವುದು.

ಆ) ಬಸ್ಸುಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಲಾಗಿದೆ. ದಯಮಾಡಿ ಬಸ್ಸುಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಧೂಮಪಾನ ಮಾಡಬೇಡಿ ಹಾಗೂ ತಮ್ಮ ಸಹ ಪ್ರಯಾಣಿಕರು ಧೂಮಪಾನ ಮಾಡದಿರುವಂತೆ ನೋಡಿಕೊಳ್ಳಿ.

ಇ) ಮದ್ಯಪಾನ ಮಾಡಿ ಪ್ರಯಾಣ ಮಾಡಬೇಡಿ. ಮದ್ಯಪಾನ ಮಾಡಿದ ಪ್ರಯಾಣಿಕರನ್ನು ವಾಹನದಿಂದ ಕೆಳಗಿಳಿಸಲು ವಾ.ಕ.ರ.ಸಾ.ಸಂಸ್ಥೆಗೆ ಅಧಿಕಾರವಿರುತ್ತದೆ.

ಈ) ನಿಷೇಧಿಸಿರುವ ವಸ್ತುಗಳು/ಪದಾರ್ಥಗಳನ್ನು ಬಸ್ಸಿನಲ್ಲಿ ಒಯ್ಯಬೇಡಿ.

ಉ) ಚಾಲನಾ ಸಮಯದಲ್ಲಿ ಚಾಲಕರನ್ನು ಮಾತುಕತೆಗೆ ಎಳೆಯುವ ಮೂಲಕ ಏಕಾಗ್ರತೆಗೆ ಭಂಗ ಉಂಟು ಮಾಡಬೇಡಿ, ಏಕಾಗ್ರತೆಯಿಂದ ಚಾಲನೆ ಮಾಡುವ ಮೂಲಕ ಅಪಘಾತ ಹಾಗೂ ಜಗಳಗಳು ಉಂಟಾಗದಿರಲು ಅನುಕೂಲವಾಗುತ್ತದೆ.

ಊ) ಬಸ್ ನಿಲ್ದಾಣಗಳಲ್ಲಿ ಭಿಕ್ಷೆ ಬೇಡುವುದನ್ನು ಪ್ರೋತ್ಸಾಹಿಸಬೇಡಿ.

ಋ) ಪ್ರಯಾಣದ ಟಿಕೇಟುಗಳನ್ನು ನಿರ್ವಾಹಕರಿಗೆ ಅಥವಾ ಯಾವುದೇ ಸಿಬ್ಬಂದಿಗೆ ಪ್ರಯಾಣದ ಕೊನೆಯಲ್ಲಿ ಅಥವಾ ಪ್ರಯಾಣದ ಮಧ್ಯದಲ್ಲಿ ಹಿಂತಿರುಗಿಸಬೇಡಿ.

ಋ) ಟಿಕೇಟ್ ರಹಿತ ಪ್ರಯಾಣದ ಬಗ್ಗೆ ನಿಮ್ಮನ್ನು ರಕ್ಷಿಸಲು ಯಾರಾದರೂ ಆಶ್ವಾಸನೆ ನೀಡಿದ್ದಲ್ಲಿ ಅದನ್ನು ನಂಬಬೇಡಿ.

ಎ) ವಾಹನದ ಒಳಗೆ ಹಾಗೂ ಬಸ್ ನಿಲ್ದಾಣದಲ್ಲಿ ಉಗುಳಬೇಡಿ ಮತ್ತು ಗಲೀಜು ಮಾಡಬೇಡಿ.

ಏ) ಬಸ್ಸಿನ ಮೇಲ್ಛಾವಣಿ ಅಥವಾ ಬಸ್ ಮೆಟ್ಟಲಿನ ಮೇಲೆ ನಿಂತು ಪ್ರಯಾಣಿಸಬೇಡಿ.

ಐ) ಪ್ರಯಾಣಿಸುವಾಗ ಕಿಟಕಿಯ ಹೊರಗಡೆ ನಿಮ್ಮ ತಲೆ ಅಥವಾ ಕೈಯನ್ನು ಚಾಚಬೇಡಿ.

ಒ) ಸಲಹೆ, ದೂರುಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವ್ಯಬ್ ಸೈಟ್ www.nwkrtc.in ಭೇಟಿ ಮಾಡಿ.

**ತಮ್ಮ ಪ್ರಯಾಣವು ಆನಂದ, ಸುರಕ್ಷಿತ ಹಾಗೂ ಆರಾಮದಾಯಕವಾಗಿರಲೆಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹಾರೈಸುತ್ತದೆ.**

★•★•★

## ದೂರುಗಳು, ಸಲಹೆಗಳು ಮತ್ತು ಪರಿಹಾರಗಳಿಗೆ ಅಧಿಕಾರಿಗಳು ಮತ್ತು ದೂರವಾಣಿ ಸಂಖ್ಯೆಗಳು: ಅನುಬಂಧ–1

| ವಿಭಾಗಗಳು | ಇ–ಮೇಲ್ | ಎಸ್.ಟಿ.ಡಿ. ಕೋಡ್ | ವಿಭಾಗೀಯ ನಿಯಂತ್ರಣಾಧಿಕಾರಿ | ವಿಭಾಗೀಯ ಸಂಚಾರ ಅಧಿಕಾರಿ | ಬಸ್ ನಿಲ್ದಾಣ/ ಕಂಟ್ರೋಲ್ ರೂಂ |
|---|---|---|---|---|---|
| ಹುಬ್ಬಳ್ಳಿ | dchbl@nwkrtc.in | 0836 | 2221028 | 2221030 | 2221037 |
| ಹಾವೇರಿ | dchvr@nwkrtc.in | 08375 | 234451 | 234461 | 232478 |
| ಬೆಳಗಾವಿ | dcbgm@nwkrtc.in | 0831 | 2468130 | 2466176 | 2467932 |
| ಚಿಕ್ಕೋಡಿ | dcckd@nwkrtc.in | 08338 | 273050 | 274418 | 272143 |
| ಉಕ.ಶಿರಸಿ | dcnk@nwkrtc.in | 08384 | 235272 | 236435 | 229952 |
| ಬಾಗಲಕೋಟ | dcbgk@nwkrtc.in | 08354 | 235389 | 235616 | 220430 |
| ಗದಗ | dcgdg@nwkrtc.in | 08372 | 236364 | 236268 | 238484 |

## ಕೇಂದ್ರ ಕಛೇರಿ, ಹುಬ್ಬಳ್ಳಿ.

1.ಮುಖ್ಯ ಸಂಚಾರ ವ್ಯವಸ್ಥಾಪಕರು. 0836-2335419.
ಮೊ:77609-91504
E-mail: ctm@nwkrtc.in

2.ಸಾರ್ವಜನಿಕ ಸಂಪರ್ಕಾಧಿಕಾರಿ 0836-2333154.
E-mail: pro@nwkrtc.in

**<u>ದೂರುಗಳು, ಸಲಹೆಗಳು ಮತ್ತು ಪರಿಹಾರಗಳಿಗೆ ವಾ.ಕ.ರ.ಸಾ.ಸಂಸ್ಥೆಯ ಘಟಕಗಳು ಮತ್ತು ಅವುಗಳ ದೂರವಾಣಿ ಸಂಖ್ಯೆಗಳು ಅನುಬಂಧ–2</u>**

| ಘಟಕ್ವ | ಇ–ಮೇಲ್ | ಎಸ್.ಟಿ.ಡಿ. ಕೋಡ್ | ದೂರವಾಣಿ ಸಂಖ್ಯೆ | ಘಟಕ | | ಎಸ್.ಟಿ. ಡಿ. ಕೋಡ್ | ದೂರವಾಣಿ ಸಂಖ್ಯೆ |
|---|---|---|---|---|---|---|---|
| ಹುಬ್ಬಳ್ಳಿ (ಗ್ರಾ–1) | dmhblm1@nwkrtc.in | 0836 | 2221035 | | | | |
| ಹುಬ್ಬಳ್ಳಿ (ಗ್ರಾ–2) | dmhblm2@nwkrtc.in | 0836 | 2221036 | | | | |
| ಹುಬ್ಬಳ್ಳಿ (ನ.ಸಾ.–1) | dmhblc1@nwkrtc.in | 0836 | 2221033 | | | | |
| ಹುಬ್ಬಳ್ಳಿ (ನ.ಸಾ.–2) | dmhblc2@nwkrtc.in | 0836 | 2221034 | | | | |
| ಧಾರವಾಡ | dmdwd1@nwkrtc.in | 0836 | 2221080 | | | | |
| | | | | | | | |
| | | | | | | | |
| ಹಾವೇರಿ | dmhvr@nwkrtc.in | 08375 | 232231 | ಉ.ಕ.ಶಿರಸಿ | dmsrs@nwkrtc.in | 08384 | 236435 |
| ಹಿರೇಕೆರೂರ | dmhkr@nwkrtc.in | 08376 | 282227 | ಕುಮಟಾ | dmkmt@nwkrtc.in | 08386 | 222004 |
| ರಾಣೆಬೆನ್ನೂರ | dmrnb@nwkrtc.in | 08373 | 269886 | ಕಾರವಾರ | dmkwr@nwkrtc.in | 08382 | 220309 |
| ಹಾನಗಲ್ | dmhng@nwkrtc.in | 08379 | 272731 | ಹಳಿಯಾಳ | dmhly@nwkrtc.in | 08284 | 220124 |
| ಬ್ಯಾಡಗಿ | dmbyd@nwkrtc.in | 08375 | 229464 | ಭಟ್ಕಳ | dmbkl@nwkrtc.in | 08385 | 226431 |
| ಸವಣೂರ | dmsnr@nwkrtc.in | 08378 | 242224 | ಯಲ್ಲಾಪೂರ | dmylp@nwkrtc.in | 08419 | 261665 |
| | | | | ದಾಂಡೇಲಿ | dmdnd@nwkrtc.in | 08284 | 232243 |
| | | | | ಅಂಕೋಲಾ | dmank@nwkrtc.in | 08388 | 231144 |
| | | | | | | | |
| ಬೆಳಗಾವಿ–1 | dmbgm1@nwkrtc.in | 0831 | 2400813 | ಬಾಗಲಕೋಟ | dmbgk@nwkrtc.in | 08354 | 220480 |
| ಬೆಳಗಾವಿ–2 | dmbgm2@nwkrtc.in | 0831 | 2400812 | ಜಮಖಂಡಿ | dmjkd@nwkrtc.in | 08353 | 220430 |
| ಬೆಳಗಾವಿ–3 | dmbgm3@nwkrtc.in | 0831 | 2400814 | ಇಳಕಲ್ | dmilk@nwkrtc.in | 08351 | 270461 |
| ಬೈಲ್‌ಹೊಂಗಲ್ | dmblh@nwkrtc.in | 08288 | 233297 | ಬದಾಮಿ | dmbdm@nwkrtc.in | 08357 | 220076 |
| ಸವದತ್ತಿ | dmsdt@nwkrtc.in | 08333 | 222589 | ಮುಧೋಳ | dmmdl@nwkrtc.in | 08350 | 280401 |
| ರಾಮದುರ್ಗ | dmrmd@nwkrtc.in | 08335 | 243163 | ಗುಳೇದಗುಡ್ಡ | dmgld@nwkrtc.in | 08357 | 200500 |
| ಖಾನಾಪುರ | dmknp@nwkrtc.in | 08336 | 223808 | ಬೀಳಗಿ | dmblg@nwkrtc.in | 08425 | 277295 |
| | | | | | | | |
| ಚಿಕ್ಕೋಡಿ | dmckd@nwkrtc.in | 08338 | 272402 | ಗದಗ | dmgdg@nwkrtc.in | 08372 | 238384 |
| ಸಂಕೇಶ್ವರ | dmsnk@nwkrtc.in | 08333 | 273548 | ರೋಣ | dmron@nwkrtc.in | 08381 | 267224 |
| ನಿಪ್ಪಾಣಿ | dmnpn@nwkrtc.in | 08338 | 220954 | ಲಕ್ಷ್ಮೇಶ್ವರ | dmlxm@nwkrtc.in | 08487 | 272239 |
| ಗೋಕಾಕ | dmgkk@nwkrtc.in | 08332 | 225047 | ನರಗುಂದ | dmnrg@nwkrtc.in | 08377 | 265526 |
| ರಾಯಬಾಗ | dmrbg@nwkrtc.in | 08331 | 244291 | ಮುಂಡರಗಿ | dmmdg@nwkrtc.in | 08371 | 262459 |
| ಅಥಣಿ | dmatn@nwkrtc.in | 08289 | 251309 | ಬೆಟಗೇರಿ | dmbtg@nwkrtc.in | 08372 | 218650 |
| | | | | ಗಜೇಂದ್ರಗಡ | dmgjd@nwkrtc.in | 08381 | 290302 |

# ಮುಂಗಡ ಕಾಯ್ದಿರಿಸುವ ಏಜಂಟರುಗಳ ವಿವರಗಳು ಅನುಬಂಧ-3

| ಕ್ರ ಸ | ವಿಭಾಗ | ಪ್ರಾಚೈಂಸ್ಸಿಗಳ ಹೆಸರು | ಬುಕ್ಕಿಂಗ ಕೇಂದ್ರದ ವಿಳಾಸ | ಅವತಾರ /ಮಾನವ ನಿರ್ವಹಣೆ | ಕಛೇರಿ ದೂರವಾಣಿ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|---|---|---|
| 1 | ಹುಬ್ಬಳ್ಳಿ | 1)ಶ್ರೀ ಅನಿಲ್ ಕಕನಾಳೆ | ತಿರುಪತಿ ವರುಣ ಟ್ರವೆಲ್ಸ್, ಅಂಗಡಿ ಸಂ:40, ಮಿತ್ರ ಮಂಡಳ ಚೌಕ್ ಪಾರ್ವತಿ, ಪೂನಾ:411009 | ಮಾನವ | 020-24441500<br>020-24451600 | 09921604959<br>09850482009 |
| | | 2)ಶ್ರೀ: ಚಂದ್ರಕಾಂತ | ಆರ್.ಟಿ.ಸಿ, ಬುಕ್ಕಿಂಗ್ ಸೆಂಟರ್, ಸೈನ್ ಸರ್ಕಲ್, ಸಿನಮೆಕ್ಸ ಹತ್ತಿರ,ಸೈನ್ (East) ಮುಂಬಯಿ-400022 | ಅವತಾರ | 022-24010886<br>022-24039887 | 09821661467<br>09867999287 |
| | | 3)ಶ್ರೀ: ಸಿ.ಪಿ. ಡೆಂಗ್ರೆ | ಓಂ ಸಾಯಿ ಜ್ಯೋತಿ ಕಮ್ಯೂನಿಕೇಶನ್, ಗಿರಿಗೌಡರ ಬಿಲ್ಡಿಂಗ್. ಕೊನೆಯ ಬಸ್ ನಿಲ್ದಾಣ ನವನಗರ, ಹುಬ್ಬಳ್ಳಿ | ಅವತಾರ | 0836-2222086 | 9449177950<br>9481682288 |
| | | 4)ಶ್ರೀ: ಬಿ. ರಾಮು | ಶ್ರೀ:ರಾಮ ಟೂರಿಸ್ಟ್ ಸಂಟರ್, ನೀಲಿಜಿನ್ ರಸ್ತೆ ಹುಬ್ಬಳ್ಳಿ | ಅವತಾರ | 036-2351670 | 9449823675 |
| | | 5)ಶ್ರೀ:ಕೆ.ಆರ್, ಪಾಟಿಲ್ | ಶ್ರೀ: ವೀರಭದ್ರೇಶ್ವರ ಟ್ರೇಡರ್ಸ, (ವಿ.ಟಿ. ಇಂಟರನೆಟ್), ವಿಟಿ-4 ಅಕ್ಷೇಸ ಏನ್ ಕ್ಲೇವ್, ಕುಸುಗಲ್ ರೋಡ್, ಹುಬ್ಬಳ್ಳಿ | ಅವತಾರ | 0836-2280358 | 9341165066 |
| | | 6)ಶ್ರೀ: ರಿಶೀಕ ಜೈನ್ | ಎಂ/ಎಸ್.ಮಧು ಟೈಮ್ಸ, ಯುರೇಕಾ ಸೆಂಟರ್. ಕೊಪ್ಪಿಕರ ರೋಡ್, ಹುಬ್ಬಳ್ಳಿ | ಅವತಾರ | 0836-2268222 | 9845813420 |
| | | 7)ಶ್ರೀಮತಿ:ಸಂಗಿತಾ. ಹರವಾಡೆ | ಎಂ/ಎಸ್:ಎಲ್‌ಜಿ.ಟೆಕ್ನಾಲಾಜಿ, ಕುಂದಗೋಳ ಕಾಂಪ್ಲೆಕ್ಸ, ಕೋರ್ಟ ಸರ್ಕಲ್, ಹುಬ್ಬಳ್ಳಿ | ಅವತಾರ | 0836-4260161 | 9448113063 |
| 2 | ಶಿರ್ಶಿ | 1)ಶ್ರೀ: ಅಮಿತ.ಕೆ.ಎಂ | ಅನ್ನಪೂರ್ಣಾ ಏಜೆನ್ಸಿ, ಹೊಸಪೇಟಿ ರಸ್ತೆ, ಶಿರ್ಶಿ | ಅವತಾರ | 08384-223440 | 9986144110 |
| | | 2)ಶ್ರೀ: ವಿ.ಆರ್. ಹೆಗಡೆ | ದೇವಸ್ಥಾನ ರಸ್ತೆ, ಮುರ್ಡೇಶ್ವರ | ಅವತಾರ | 08385-260979 | 9242702795 |
| | | 3)ಶ್ರೀ: ಡಿ.ಜಿ. ಹೆಗಡೆ | ಶ್ರೀ:ಗಣೇಶ ಜೆರಾಕ್ಸ & ಫ್ಯಾಕ್ಸ ಸೆಂಟರ್, ಟ್ರಾಫಿಕ್ ಸರ್ಕಲ್, ಹೊನ್ನಾವರ | ಅವತಾರ | 08387-220997 | 9880380253 |
| | | 4)ಶ್ರೀ: ಡಿಎನ್. ನಾಯ್ಕ | ಶ್ರೀ: ಗಣೇಶ ಜೆರಾಕ್ಸ ಸೆಂಟರ್ ಬಸ್ ನಿಲ್ದಾಣದ ಎದುರು, ಅಂಕೋಲಾ | ಅವತಾರ | 08388-231359 | 9343842776 |
| | | 5)ಶ್ರೀ ಎಂ.ಎಂ.ಬುಗದೆ | ದೇವಸ್ಥಾನದ ಹತ್ತಿರ, ಗೋಕರ್ಣ | ಅವತಾರ | 0836-257941 | 9916181802 |
| | | 6)ಶ್ರೀ ವಿಲ್ಸನ್ ಸರ್ವೇರ ಡಿಕೋಸ್ಟಾ | ಬಸ್ ನಿಲ್ದಾಣದ ಹತ್ತಿರ, ಯಲ್ಲಾಪೂರ | ಅವತಾರ | ----- | 9379084731 |
| | | 7)ಶ್ರೀ ಕು. ಕೆ.ವೈ. ಕೋಕಿತ್ಕರ್ | ಬಸ್ ನಿಲ್ದಾಣದ ಎದುರು, ದಾಂಡೇಲಿ | ಅವತಾರ | 08284-234747 | 9448025311 |
| | | 8)ಆರ್ ಎ ಹೊನ್ನಗುಂಡಿ | ಬಸ್ ನಿಲ್ದಾಣದ ಎದುರು, ಸಿದ್ದಾಪುರ | ಅವತಾರ | 08389-231260 | 9449192217 |
| 3 | ಬೆಳಗಾಂವ | 1) ಶ್ರೀ:ಎಂ.ಎಸ್. ಡಣಗಾರ | ಉಷಾ ಟ್ರಾವೆಲ್ಸ್ ಎ-14 ಮಹಾಲಕ್ಷ್ಮಿ ಚೇಂಬರ್ಸ, ಎಸ್.ಟಿ. ಬಸ್ ನಿಲ್ದಾಣ ಎದುರು, ಕೊಲ್ಲಾಪುರ | ಮಾನವ | 0231-2538181 | 9423276476 |
| | | 2) ಶ್ರೀ:ವಿಜಯ ಯಡಾಲ್ | ಸಾಯಿ ನಿವಾಸ್ ಟ್ರಾವೆಲ್ಸ್ ಅಂಗಡಿ ಸಂಖ್ಯೆ:08 ಸುಖಸಾಗರ ಕಾಂಪ್ಲೆಕ್ಸ, ನೆಹರುನಗರ,ಬೆಳಗಾಂವ | ಅವತಾರ | 0831-2473889 | 9980564386 |
| | | 3) ಶ್ರೀ:ಆರ್.ಎಚ್. ಲಮಾಣಿ | ಮಹಾಲಕ್ಷ್ಮಿ ಟೂರ್ಸ್ & ಟ್ರಾವೆಲ್ಸ್, ಸುಖಸಾಗರಹೋಟೆಲ್ ಎದುರುಗಡೆ, ನೆಹರುನಗರ, ಬೆಳಗಾಂವ. | ಅವತಾರ | 0831-4208402 | 9880049303 |
| | | 4) ಲೋಕಮಾನ್ಯ ಮಲ್ಟಿಪರ್ಪಜ್ ಕೋ-ಆಪರೇಟಿವ್ ಸೋಸಾಯಿಟಿ | ಲೋಕಮಾನ್ಯ ಮಲ್ಟಿಪರ್ ಪೋಜ್ ಕೋ-ಆಪರೇಟಿವ್ ಸೋಸೈಟಿ, ಗೋವಾವೇಸ್ ಶಹಾಪುರ, ಬೆಳಗಾಂವ | ಅವತಾರ | 0831-2407062 | 9986514675 |

| | | | | | | |
|---|---|---|---|---|---|---|
| | | 5) ಶ್ರೀ:ಜೆ.ಬಿ. ಕೊಲೆಕಾರ | ಲಕ್ಷ್ಮಿ ಟೂರ್ಸ್ & ಟ್ರಾವೆಲ್ಸ್, ಸಿ.ಡಿ. ದೇಶಮುಖ ರಸ್ತೆ, ಮಾರುತಿ ಕಾಂಪ್ಲೆಕ್ಸ್ ಎದುರಿಗೆ, 2ನೇ ರೇಲ್ವೆ ಗೇಟ್, ಟಿಳಕವಾಡಿ, ಬೆಳಗಾಂವ. | ಅವತಾರ | 0831-2433219 | 9845029757 |
| | | 6) ಶ್ರೀ ಉದಯಕುಮಾರ ಎಸ್ ಕಾಳೆ | ಸಂಜಯ ಜನರಲ್ ಸ್ಟೋರ್ಸ, ತಿಲಕ ರಸ್ತೆ, ಹರಿಮಂದಿರ, ಭಾಗ್ಯ ನಗರ, ಬೆಳಗಾವಿ. | ಅವತಾರ | 0831-2484900 | 9845038375 |
| | | 7) ಶ್ರೀ ಜಿನೇಸ್ ಎಸ್ ಉಪಾಧ್ಯೆ | ಆರ್ ಆರ್ ಟ್ರಾವೆಲ್ಸ ಪಾಯಿಂಟ್, ಸಿ ಡಿ ದೇಶಮುಖ ರಸ್ತೆ, ಟಿಳಕವಾಡಿ, ಬೆಳಗಾವಿ. | ಅವತಾರ | 0831-4211728 | 9342703556 |
| | | 8) ಎಸ್ ಎಚ್ ಖೋಜಾ | ಪೇಸ್ ಟೂರ್ಸ & ಟ್ರಾವೆಲ್ಸ, ಸಮರ್ಥ ಮಹಡಿ, ಅಂಗಡಿ ಸಂಖ್ಯೆ ಎ-01, ಆನಿಗೋಳ, ಬೆಳಗಾವಿ | ಅವತಾರ | 0831-24201983 | 9945526383 |
| 4 | ಬಾಗಲಕೆ ೋಟ | 1) ಶ್ರೀ:ಎಸ್.ಎಸ್. ಶಾಸ್ತ್ರಿ | ಅಂಗಡಿ ಸಂ:13, ಎಸ್‌ವಿಎಂ ಕಾಲೇಜು ಕಾಂಪ್ಲೆಕ್ಸ, ಮೇನ ರೋಡ್, ಇಳಕಲ್ | ಅವತಾರ | 083151-272857 | 9448344863 |

## ಕೇಂದ್ರ ಬಸ್ ನಿಲ್ದಾಣ, ಹುಬ್ಬಳ್ಳಿಯಲ್ಲಿರುವ ಸೌಲಭ್ಯಗಳು ಅನುಬಂಧ-4

| | |
|---|---|
| ಮುಂಗಡ ಕಾಯ್ದಿರಿಸುವ ಕೌಂಟರ್‌ಗಳು | ಮಹಿಳೆಯರ ನಿರೀಕ್ಷಣಾ ಕೊಠಡಿ |
| ಇಳಿಯುವ ಪ್ಲಾಟ್‌ಫಾರಂಗಳು | ಹಾಲಿನ ಬೂತ್/ಪಾರ್ಲರ್ |
| ಬೇಕರಿ ಮತ್ತು ಚಾಟ್ ಸ್ಟಾಲ್ಸ | ನಂಬರ್‌ಗಳ ಫ್ಲಾಟ್ ಫಾರಂಗಳು |
| ಪುಸ್ತಕ ಮಳಿಗೆ | ಪಾನ್ ಬೀಡಾ ಸ್ಟಾಲ್ |
| ಅಂಗವಿಕಲರಿಗೆ ವಿಶೇಷ ಕುರ್ಚಿಗಳ ವ್ಯವಸ್ಥೆ | ಪಾಸ್ ವಿತರಣಾ ಕೌಂಟರ್ |
| ಲಗೇಜ್ ರೂಂ | ಪೋಲಿಸ್ ಹೊರ ಚೌಕಿ |
| ಚಾಲಕ/ನಿರ್ವಾಹಕರ ವಿಶ್ರಾಂತಿ ಕೊಠಡಿ | ಅಂಚೆ ಕಛೇರಿ |
| ಸೈಕಲ್/ಸ್ಕೂಟರ್/ಕಾರ್ ಪಾರ್ಕಿಂಗ್ | ಸಾರ್ವಜನಿಕ ನಿವೇದನಾ ವ್ಯವಸ್ಥೆ |
| ಹೊರಡುವ ಬಸ್‌ಗಳ ಅಂಕಣಗಳು | ಉಪಹಾರ ಮಂದಿರ |
| ಟೈಮ್ ಟೇಬಲ್‌ಗಳ ಪ್ರದರ್ಶನ | ಕರ್ನಾಟಕ ರಾಜ್ಯದ ರೂಟ್ ಮ್ಯಾಪ್ |
| ಕುಡಿಯುವ ನೀರಿನ ವ್ಯವಸ್ಥೆ | ಆಸನಗಳ ವ್ಯವಸ್ಥೆ |
| ಕಸದ ತೊಟ್ಟಿಗಳು | ತಂಪು ಪಾನೀಯ ಮಳಿಗೆ |
| ವಿಚಾರಣಾ ಕೌಂಟರ್ | ಸಲಹೆ/ದೂರು ಪುಸ್ತಕ |
| ಹಣ್ಣಿನ ರಸದ ಮಳಿಗೆ | ದೂರವಾಣಿ ಬೂತ್ |
| ಹೋರ್ಡಿಂಗ್ಸ | ಮೂತ್ರಾಲಯ/ಶೌಚಾಲಯಗಳು |
| ಐಸ್ ಕ್ರೀಮ್ ಮಳಿಗೆ | ತೂಕ ಮಾಡುವ ಯಂತ್ರಗಳು |

## ಸಾಂದರ್ಭಿಕ ಒಪ್ಪಂದದ ಸೇವೆಯ  ದರಗಳು ಅನುಬಂಧ-6

| ಕ್ರ.ಸಂ. | ಬಸ್ಸಿನ ಮಾದರಿ | ಕುಳಿತುಕೊಳ್ಳಲು ಆಸನಗಳ ಮಿತಿ | ದರ ಪ್ರತಿ ಕಿ.ಮೀ (ರೂ. ಗಳಲ್ಲಿ) | ಪ್ರತಿ ದಿನಕ್ಕೆ ಕನಿಷ್ಟ ದರ ಕಿ. ಮೀ ಗಳಲ್ಲಿ | ಪ್ರತಿ ದಿನಕ್ಕೆ ಕನಿಷ್ಟ ದರ (24 ಘಂಟೆಗಳು) (ರೂ. ಗಳಲ್ಲಿ) | 40 ಕಿಮಿ ದೂರದ ನಂತರ ಪ್ರತಿ ಘಂಟೆ ಅಥವಾ ಭಾಗಶ: ಅವಧಿಗೆ ದರ (ರೂ. ಗಳಲ್ಲಿ) |
|---|---|---|---|---|---|---|
| 1 | ಮಿನಿ ಬಸ್ | 41 | 18 | 250 | 4,500 | 720 |
| 2 | ಗ್ರಾಮಾಂತರ | 61/51 | 21 | 300 | 6,300 | 840 |
| 3 | ನವೀಕೃತ ವಾಯವ್ಯ ಸಾರಿಗೆ | 56 | 22 | 300 | 6600 | 880 |
| 4 | ವಾಯವ್ಯ ಕರ್ನಾಟಕ ಸಾರಿಗೆ | 56/51 | 24 | 300 | 7,200 | 960 |
| 5 | ವಾಯವ್ಯ ಕರ್ನಾಟಕ ಸಾರಿಗೆ (12ಮೀ.ಚಾಸಿ) | 65 | 29 | 300 | 8,700 | 1160 |
| 6 | ಸೆಮಿ ಡೀಲಕ್ಸ್ | 45 | 25 | 300 | 7,500 | 1,000 |
| 7 | ರಾಜಹಂಸ – ಎಕ್ಸಿಕ್ಯೂಟಿವ್ | 39/36 | 30 | 350 | 10,500 | 1,200 |
| 8 | ರಾಜಹಂಸ – ಸೆಮಿ ಸ್ಲೀಪರ್ | 31 | 31 | 350 | 10,850 | 1,240 |
| 9 | ರಾಜಹಂಸ (12ಮೀ.ಚಾಸಿ) | 44 | 35 | 350 | 12,250 | 1,400 |
| 10 | ಶೀತಲ್ | 60 | 43 | 350 | 15,050 | 1,720 |
| 11 | ಮೇಘದೂತ | 44 | 43 | 350 | 15,050 | 1,720 |
| 12 | ಕರೋನ | 43 | 41 | 400 | 16,400 | 1,640 |
| 13 | ವೋಲ್ವೋ – ಸೆಮಿ ಸ್ಲೀಪರ್ | 45/36 | 50 | 400 | 20,000 | 2,000 |
| 14 | ವೋಲ್ವೋ | 38 | 55 | 300 | 16,500 | 2,200 |
| 15 | ಸೆಮಿ ಲೋ ಫ್ಲೋರ್ | 42 | 26 | 250 | 6,500 | 1,040 |

***ಸೂಚನೆ :*** 1) ಮಾನ್ಯತೆ ಪಡೆದ ಶಾಲೆ/ಕಾಲೇಜುಗಳಿಗೆ ಪ್ರತಿ ಕಿ.ಮೀ.ಗೆ ರೂ.1/– ರಂತೆ ರಿಯಾಯಿತಿ ನೀಡಲಾಗುವುದು. ಮೇಲ್ಕಂಡ ದರಗಳು ಆಗಿಂದಾಗ್ಗೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.

2) ಹೆಚ್ಚಿನ ಮಾಹಿತಿಗಾಗಿ ಅನುಬಂಧ–1 ಮತ್ತು 2 ರಲ್ಲಿ ಇರುವ ಸಂಬಂಧಪಟ್ಟ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿ ಅಥವಾ ಘಟಕ ವ್ಯವಸ್ಥಾಪಕರನ್ನು ಸಂಪರ್ಕಿಸುವುದು ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಒಪ್ಪಂದದ ಆಧಾರದ  ಭಾಡಿಗೆಯನ್ನು ಸ್ವೀಕರಿಸಲು/ಹಿಂತಿರುಗಿಸಲು ಸಿಂಗಲ್ ವಿಂಡೋ ಸೌಲಭ್ಯ ನೀಡಲಾಗಿದೆ.

## 2. ಚಾರ್ಟಡ್ ಕಾಂಟ್ರಾಕ್ಟ್ ಸೇವೆಯ ದರಗಳು: ಅನುಬಂಧ–7

| ಕ್ರಮ. ಸಂಖ್ಯೆ | ಬಸ್ಸಿನ ಮಾದರಿ | ಪ್ರತಿ ಕಿ ಮೀ. ದರ (ರೂ.ಗಳಲ್ಲಿ) |
|---|---|---|
| 1 | ಮಿನಿ ಬಸ್ | 16 |
| 2 | ಸಾಮಾನ್ಯ/ಗ್ರಾಮಾಂತರ | 19 |
| 3 | ನವೀಕರಿಸಿದ ವಾಯವ್ಯ ಸಾರಿಗೆ | 20 |
| 4 | ವಾಯವ್ಯ ಸಾರಿಗೆ | 21 |
| 5 | ಸೆಮಿ ಡೀಲಕ್ಸ್ | 22 |
| 6 | ರಾಜಹಂಸ (ಬೆಳಿಗ್ಗೆ 08:00 ರಿಂದ ರಾತ್ರಿ 20:00 ಗಂಟೆಯವರೆಗೆ) | 26 |
| 7 | ಸೆಮಿ ಲೋಫ್ಲೋರ್ | 22 |
| 8 | ವೋಲ್ವೋ | 55 |

ಸೂಚನೆ : 1) ರಿಯಾಯಿತಿ: ಶಾಲೆಗಳಿಗೆ ಪ್ರತಿ ಕಿ.ಮೀ. ರೂ. 2/– ಮತ್ತು ಕಾಲೇಜುಗಳಿಗೆ ರೂ. 1/–.

2) ಹೆಚ್ಚುವರಿ: ವಿಮಾ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಪ್ರತಿ ಕಿ.ಮೀ ಗೆ ರೂ. 2/–.

3) ಮೇಲ್ಕಂಡ ದರಗಳು ಆಗಿಂದಾಗ್ಗೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.

4) ಹೆಚ್ಚಿನ ಮಾಹಿತಿಗಾಗಿ ಅನುಬಂಧ–1 ಮತ್ತು 2 ರಲ್ಲಿ ಇರುವ ಸಂಬಂಧಪಟ್ಟ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿ ಅಥವಾ ಘಟಕ ವ್ಯವಸ್ಥಾಪಕರನ್ನು ಸಂಪರ್ಕಿಸುವುದು. ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಒಪ್ಪಂದದ ಆಧಾರದ ಬಾಡಿಗೆಯನ್ನು ಸ್ವೀಕರಿಸಲು/ಹಿಂತಿರುಗಿಸಲು ಸಿಂಗಲ್ ವಿಂಡೊ ಸೌಲಭ್ಯ ನೀಡಲಾಗಿದೆ.

**ಜಾಹೀರಾತು ಸ್ಥಳ :** **ಅನುಬಂಧ–8**

| ಕ್ರ. ಸಂ. | ಪ್ಯಾನೆಲ್ಸ್ | ಕನಿಷ್ಠ ಸ್ಥಳ | ಗರಿಷ್ಠ ಸ್ಥಳ | |
|---|---|---|---|---|
| | | | ಸಾಮಾನ್ಯ ಮಾದರಿ ಬಸ್ಸುಗಳು | ಏರೋಡೈನಮಿಕ್ ಬಸ್ಸುಗಳು |
| 1 | ಹಿಂಬದಿ ಪ್ಯಾನೆಲ್ | 10 ಚ. ಅಡಿ | 22 ಚ. ಅಡಿ | 16 ಚ. ಅಡಿ |
| 2 | ಎಡಬದಿ ಪ್ಯಾನೆಲ್ | 36 ಚ. ಅಡಿ | 63 ಚ. ಅಡಿ | 50 ಚ. ಅಡಿ |
| 3 | ಬಲಬದಿ ಪ್ಯಾನೆಲ್ | 36 ಚ. ಅಡಿ | 68 ಚ. ಅಡಿ | 59 ಚ. ಅಡಿ |
| 4 | ಒಳಬದಿ ಪ್ಯಾನೆಲ್ | 2 ಚ. ಅಡಿ | 2 ಚ. ಅಡಿ | 2 ಚ. ಅಡಿ |

**ಜಾಹೀರಾತು ದರ :**

| ಪ್ಯಾನೆಲ್ಸ್ | ನಗರ ಸೇವೆ ವಾಹನಗಳು ಪ್ರತಿ ಚದರ ಅಡಿಗೆ ಪ್ರತಿ ತಿಂಗಳಿಗೆ ರೂ. | ಎಕ್ಸಪ್ರೆಸ್ ಮತ್ತು ಲಕ್ಷುರಿ ಸೇವೆ ವಾಹಗಳು ಪ್ರತಿ ಚದರ ಅಡಿಗೆ ಪ್ರತಿ ತಿಂಗಳಿಗೆ ರೂ. | ಸಾಮಾನ್ಯ ಸೇವೆ ವಾಹನಗಳು ಪ್ರತಿ ಚದರ ಅಡಿಗೆ ಪ್ರತಿ ತಿಂಗಳಿಗೆ ರೂ. |
|---|---|---|---|
| ಹಿಂಬದಿ ಪ್ಯಾನೆಲ್ | ರೂ. 25/- | ರೂ. 20/- | ರೂ. 15/- |
| ಎಡ/ಬಲಬದಿ ಪ್ಯಾನೆಲ್ | ರೂ. 10/- | ರೂ. 09/- | ರೂ. 06/- |
| ಒಳಬದಿ ಪ್ಯಾನೆಲ್ (ಚಾಲಕನ ಹಿಂದೆ) | ರೂ. 65/- | ರೂ. 65/- | ರೂ. 50/- |

**ಪೂರ್ಣ ವಾಹನ ಜಾಹೀರಾತು ದರ :**

| | | |
|---|---|---|
| ನಗರ ಸೇವೆ ವಾಹನಗಳು | ರೂ. 4500/- | ಪ್ರತಿ ವಾಹನಕ್ಕೆ ಪ್ರತಿ ತಿಂಗಳಿಗೆ |
| ಎಕ್ಸ್‌ಪ್ರೆಸ್ ವಾಹನಗಳು | ರೂ. 4500/- | ಪ್ರತಿ ವಾಹನಕ್ಕೆ ಪ್ರತಿ ತಿಂಗಳಿಗೆ |
| ಸಾಮಾನ್ಯ ವಾಹನಗಳು | ರೂ. 4500/- | ಪ್ರತಿ ವಾಹನಕ್ಕೆ ಪ್ರತಿ ತಿಂಗಳಿಗೆ |

- ಮೇಲ್ಕಂಡ ದರ ಡಿಬೇಸಿಂಗ ದರ ಒಳಗೊಂಡಿದ್ದು, ಆದರೆ ಮುನ್ಸಿಪಾಲಿಟಿ ತೆರಿಗೆ ಹೊರತುಪಡಿಸಿ.
- ಜಾಹೀರಾತುದಾರರು ಸ್ಥಳೀಯ ಜಾಹೀರಾತು ತೆರಿಗೆ ಮತ್ತು ಜಾಹೀರಾತುಗಳನ್ನು ಅಳವಡಿಸಲು ತಗಲುವ ವೆಚ್ಚವನ್ನು ಭರಿಸಬೇಕಾಗಿರುತ್ತದೆ.
- ಜಾಹೀರಾತು ಪ್ರದರ್ಶನ ಒಂದು ತಿಂಗಳಿಗಿಂತ ಕಡಿಮೆಯಿಲ್ಲದೆ ಹಾಗೂ ಒಂದು ವರ್ಷಕ್ಕೆ ಮೀರದಂತೆ ಪಡೆಯುವುದು.
- ಜಾಹೀರಾತು ದರ/ಜಾಹೀರಾತು ತೆರಿಗೆಯನ್ನು ಮುಂಗಡವಾಗಿ ಡಿ.ಡಿ./ಪೇ ಆರ್ಡರ್ ಮುಖಾಂತರ ಪಾವತಿಸತಕ್ಕದ್ದು.
- 43.50 ಚ.ಅಡಿ ಕನಿಷ್ಟ ೩ ತಿಂಗಳಿಗೆ ಮೀರಿ ಜಾಹೀರಾತು ಪಡೆದಲ್ಲಿ ೫% ರಿಯಾಯಿತಿಯನ್ನು ನೀಡಲಾಗುವುದು.
- ೮೭೦೦ ಚ.ಅಡಿಗೆ ಮೀರಿ ಕನಿಷ್ಟ ೩ ತಿಂಗಳಿಗೆ ಜಾಹೀರಾತು ಪಡೆದಲ್ಲಿ ೧೦% ರಿಯಾಯಿತಿಯನ್ನು ನೀಡಲಾಗುವುದು.
- ೪೩೫೦೦ ಚ.ಅಡಿಗೆ ಮೀರಿ ಕನಿಷ್ಟ ೩ ತಿಂಗಳಿಗೆ ಜಾಹೀರಾತು ಪಡೆದಲ್ಲಿ ೧೫% ರಿಯಾಯಿತಿಯನ್ನು ನೀಡಲಾಗುವುದು.
- ೧೩೦೦೦೦ ಚ.ಅಡಿಗೆ ಮೀರಿ ಕನಿಷ್ಟ ೩ ತಿಂಗಳಿಗೆ ಜಾಹೀರಾತು ಪಡೆದಲ್ಲಿ ೨೫% ರಿಯಾಯಿತಿಯನ್ನು ನೀಡಲಾಗುವುದು.

- ಮೇಲ್ಕಂಡ ದರಗಳು ಆಗಿಂದಾಗ್ಗೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.

----ಸಮಾಪ್ತಿ----